# ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು

## ದಿನಾಂಕ: 24–01–2024 ರಂದು ಅಪರಾಹ್ನ 3.30 ಗಂಟೆಗೆ ಪ್ರಾಧಿಕಾರದ ಆಡಳಿತ ಕಛೇರಿಯ ಸಭಾಂಗಣದಲ್ಲಿ ಜರಗಿದ ಪ್ರಾಧಿಕಾರದ 2ನೇ ಸಭೆಯ ನಡವಳಿಗಳು

**ಅಧ್ಯಕ್ಷರು : ಮಾನ್ಯ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು**

**ಹಾಜರಿ : ಹಾಜರಿ ಪುಸ್ತಕದಲ್ಲಿ ಸಹಿ ಮಾಡಿದ ಸದಸ್ಯರುಗಳು**

*****

ಪ್ರಾರಂಭದಲ್ಲಿ ಪ್ರಾಧಿಕಾರದ ಆಯುಕ್ತರು, ಮಾನ್ಯ ಅಧ್ಯಕ್ಷರನ್ನು ಮತ್ತು ಸಭೆಯಲ್ಲಿ ಹಾಜರಿದ್ದ ಮಾನ್ಯ ಶಾಸಕರು, ಮೂಡಬಿದ್ರೆ ಕ್ಷೇತ್ರ ಇವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಪ್ರಾಧಿಕಾರದ 2ನೇ ಸಭೆಗೆ ಸ್ವಾಗತಿಸಿ, ಸಭೆಯನ್ನು ನಡೆಸಿಕೊಡಲು ಅಧ್ಯಕ್ಷರನ್ನು ಕೋರಿದರು. ನಂತರ ವಿಷಯಗಳ ಬಗ್ಗೆ ಚರ್ಚಿಸಿ ಈ ಕೆಳಗಿನಂತೆ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

**<u>ವಿಷಯ ಸಂಖ್ಯೆ. 1: ದಿ: 05–09–2022 ರಂದು ಜರುಗಿದ ಪ್ರಾಧಿಕಾರದ ಪ್ರಥಮ ಸಭೆಯ ನಡವಳಿಗಳ ನಿರ್ಣಯಗಳಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ ಮತ್ತು ಅನುಮೋದನೆ.</u>**

**<u>ನಿರ್ಣಯ:</u>** ದಿ: 05–09–2022 ರಂದು ಜರುಗಿದ ಪ್ರಾಧಿಕಾರದ ಪ್ರಥಮ ಸಭೆಯ ನಡವಳಿಗಳಿಗೆ ತೆಗೆದುಕೊಂಡ ಪಾಲನಾ ವರದಿಯನ್ನು ಪರಿಶೀಲಿಸಿ ಅನುಮೋದಿಸಲಾಯಿತು.

**<u>ವಿಷಯ ಸಂಖ್ಯೆ 2 : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ 2021–22 ಮತ್ತು 2022–23 ನೇ ಸಾಲಿನ ಆರ್ಥಿಕ ವೆಚ್ಚಗಳ ಪರಿಶೀಲನೆ ಮತ್ತು ಅನುಮೋದನೆ ಕುರಿತು.</u>**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ 2021–22 ಮತ್ತು 2022–23 ನೇ ಸಾಲಿನ ಆರ್ಥಿಕ ವೆಚ್ಚಗಳ ಪರಿಶೀಲನೆ ಮತ್ತು ಅನುಮೋದನೆ.

**<u>ನಿರ್ಣಯ:</u>** ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ 2021–22 ಮತ್ತು 2022–23 ನೇ ಸಾಲಿನ ಆರ್ಥಿಕ ವೆಚ್ಚಗಳನ್ನು ಪರಿಶೀಲಿಸಲಾಯಿತು. ಹಾಗೂ ವಿವಿಧ ವಿಭಾಗಗಳಿಂದ ಬರುವ ಆದಾಯ ಮತ್ತು ಖರ್ಚು ವೆಚ್ಚಗಳ ವಿವರಗಳ ವರದಿಯನ್ನು ಪ್ರತ್ಯೇಕವಾಗಿ ತಯಾರಿಸಿ ನಿರ್ವಹಿಸಲು ಸೂಚಿಸಲಾಯಿತು. ಸದ್ರಿ ವರದಿಯನ್ನು ಪರಿಶೀಲಿಸಲು ಈ ಕೆಳಕಾಣಿಸಿದ ಉಪಸಮಿತಿಯನ್ನು ರಚಿಸಿ ಸಮಿತಿಯ ವರದಿಯನ್ನು ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಯವರು ದಕ್ಷಿಣ ಕನ್ನಡ ಜಿಲ್ಲೆ ಇವರ ಅವಗಾಹನೆಗೆ ಮಂಡಿಸಲು ನಿರ್ಧರಿಸಲಾಯಿತು.

**<u>ಉಪಸಮಿತಿ :</u>**

1) ಮುಖ್ಯ ಲೆಕ್ಕ ಪತ್ರ ಅಧಿಕಾರಿ, ಮೆಸ್ಕಾಂ ಕಛೇರಿ, ಮಂಗಳೂರು – ಅಧ್ಯಕ್ಷರು
2) ಲೆಕ್ಕ ಪತ್ರ ಅಧಿಕಾರಿ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು – ಸದಸ್ಯರು
3) ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಮಂಗಳೂರು – ಸದಸ್ಯ ಕಾರ್ಯದರ್ಶಿ

**ಕ್ರಮ: ಲೆಕ್ಕ ಪತ್ರ ಅಧಿಕಾರಿ,** ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ

**ವಿಷಯ ಸಂಖ್ಯೆ 3 : ಪ್ರಾಧಿಕಾರದ ಸಭೆಗಳಲ್ಲಿ ವ್ಯವಹರಣೆಗೆ ಸಂಬಂಧಿಸಿದ ನಿಯಮಗಳ (Regulations) ಕರಡು ರಚನೆ ಕುರಿತು.**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2018 ರ ಕಲಂ 8(2) ರಂತೆ ಪ್ರಾಧಿಕಾರವು ತನ್ನ ಸಭೆಗಳಲ್ಲಿ ವ್ಯವಹಾರ ನಿರ್ವಹಣೆಗೆ ಸಂಬಂಧಿಸಿ ಮಂಡಿಸಿದ ವ್ಯವಹರಣೆ ನಿಯಮಗಳ (Regulations) ಕರಡನ್ನು ದಿ: 5–9–2022 ರಂದು ಜರಗಿದ ಪ್ರಾಧಿಕಾರದ ಪ್ರಥಮ ಸಭೆಯಲ್ಲಿ ಪರಿಷ್ಕರಿಸಿ ಅಂಗೀಕರಿಸಲಾಗಿರುವುದನ್ನು ಸರಕಾರದ ಅವಗಾಹನೆಗೆ ದಿ: 15–9–2022 ರಂದು ಸಲ್ಲಿಸಲಾಗಿತ್ತು, ಸದ್ರಿ ನಿಯಮಗಳಿಗೆ ಸಂಬಂಧಿಸಿ ಸರಕಾರದ ಅಧೀನ ಕಾರ್ಯದರ್ಶಿಯವರ ಸಚಿವಾಲಯದಿಂದ ದಿನಾಂಕ 3–12–2022 ರಂದು ಬಂದಿರುವ ಪತ್ರದಲ್ಲಿ ಈ ಕೆಳಕಾಣಿಸಿದಂತೆ ಕರಡನ್ನು ರಚಿಸಿ ಸರಕಾರದ ಅನುಮೋದನೆಗಾಗಿ ಸಲ್ಲಿಸುವಂತೆ ತಿಳಿಸಿರುತ್ತಾರೆ.

“ಸರಕಾರದ ಅನುಮೋದನೆಗಾಗಿ ಕಳುಹಿಸಲಾದ ನಿಯಮಗಳಿಗೆ ಸರಕಾರದ ಪೂರ್ವಾನುಮತಿ ಪಡೆದಿರುವುದಿಲ್ಲ. ಪ್ರಾಧಿಕಾರದ ಸಭೆಗಳಿಗೆ ಸಂಬಂಧಿಸಿದಂತೆ ಮಾತ್ರ ನಿಯಮಗಳನ್ನು ರಚಿಸಲಾಗಿದೆ. ಯಾವುದೇ ಇಲಾಖೆ/ನಿಗಮ/ಮಂಡಳಿ/ಪ್ರಾಧಿಕಾರ/ಸಂಸ್ಥೆಗಳು ಅಧಿನಿಯಮಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ **ಸಮಗ್ರ ನಿಯಮ** (Regulations) ಗಳನ್ನು ಒಟ್ಟಿಗೆ ರಚನೆ ಮಾಡಬೇಕಾಗುತ್ತದೆ. ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 40 ರನ್ವಯ ಅಗತ್ಯವಾಗಬೇಕಾದ ಅಥವಾ ಅಗತ್ಯವಾಗಬಹುದಾದ ಯಾವುದೇ ವಿಷಯದ ಬಗ್ಗೆ ನಿಯಮಗಳ ಕರಡನ್ನು ರಚಿಸಿ ಸರಕಾರದ ಅನುಮೋದನೆಗಾಗಿ ಸಲ್ಲಿಸುವಂತೆ ನಿರ್ದೇಶನ ನೀಡಿರುತ್ತಾರೆ.”

ಆದ್ದರಿಂದ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದ **ಸಮಗ್ರ ನಿಯಮ** (Regulations) ಗಳನ್ನು ಒಟ್ಟಿಗೆ ರಚನೆ ಮಾಡಿ ಸರಕಾರದ ಅನುಮೋದನೆಗೆ ಸಲ್ಲಿಸುವ ಕುರಿತು ಕ್ರಮಕೈಗೊಳ್ಳಬೇಕಾಗಿದೆ. ಈ ಕುರಿತು ನಿರ್ಧಾರಕ್ಕಾಗಿ ಮಂಡಿಸಿದೆ.

**ನಿರ್ಣಯ:** ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಸಮಗ್ರ ನಿಯಮಗಳ (Regulations) ನ್ನು ತಯಾರಿಸಲು ಸರಕಾರವು ನಿರ್ದೇಶನ ನೀಡಿದಂತೆ, ಬನ್ನೆರುಘಟ್ಟ ನ್ಯಾಶನಲ್ ಪಾರ್ಕ್ ಅಥವಾ ಹಂಪಿ ಅಭಿವೃದ್ಧಿ ಪ್ರಾಧಿಕಾರದ ನಿಯಮ ಮತ್ತು ನಿಬಂಧನೆಗಳನ್ನು ಪರಿಶೀಲಿಸಿ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಸಮಗ್ರ ನಿಯಮಗಳ (Regulations) ನ್ನು ರಚಿಸಲು ಸಭೆಯಲ್ಲಿ ಹಾಜರಿದ್ದ ಈ ಕೆಳಕಾಣಿಸಿದ ಅಧಿಕಾರಿಗಳ ಉಪ ಸಮಿತಿಯನ್ನು ರಚಿಸಲು ಪ್ರಾಧಿಕಾರದ ಅಧ್ಯಕ್ಷರು ಸೂಚಿಸಿದರು.

ಪ್ರಾಧಿಕಾರ ಅಧಿನಿಯಮ 2018 ರ ಕಲಂ 8(2) ಮತ್ತು ಅಧಿನಿಯಮ ಕಲಂ 40 ಕ್ಕೆ ಸಂಬಂಧಿಸಿ, ಜೈವಿಕ ಉದ್ಯಾನವನ, ವಿಜ್ಞಾನ ಕೇಂದ್ರ, ಇಂಜಿನೀಯರಿಂಗ್ ವಿಭಾಗ ಮತ್ತು ಇತರೆ ವಿಭಾಗಗಳಿಗೆ ಅಳವಡಿಸಿಕೊಳ್ಳಬೇಕಾದ ಅಧಿಕಾರ ಪ್ರತ್ಯಾಯೋಜನೆ ಬಗ್ಗೆ ಸಮಗ್ರವಾಗಿ ನಿಯಮಗಳನ್ನು ತಯಾರಿಸಿ ನೀಡಿದಲ್ಲಿ ಸರಕಾರದ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುವುದು ಎಂದು ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್ ಇವರು ತಿಳಿಸಿದರು.

**ಉಪ ಸಮಿತಿ**

1) ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು – ಅಧ್ಯಕ್ಷರು
2) ಜನರಲ್ ಮ್ಯಾನೇಜರ್, ಮೆಸ್ಕಾಂ, ಮಂಗಳೂರು – ಸದಸ್ಯರು
3) ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ – ಸದಸ್ಯ ಕಾರ್ಯದರ್ಶಿ

ಇವರುಗಳು ಜಂಟಿಯಾಗಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಬೇಕಾಗಿರುವ ಸಮಗ್ರ ನಿಯಮಗಳ (Regulations) ನ್ನು ರಚಿಸಿ ವಿವಿಧ ವಿಷಯಗಳಿಗೆ ಸಂಬಂಧಿಸಿ ಆಡಳಿತ ಮತ್ತು ಅಧಿಕಾರ ಪ್ರತ್ಯಾಯೋಜನೆ ಹಂಚಿಕೆ ಮಾಡುವ ಬಗ್ಗೆ

ನಿಯಮಗಳನ್ನು ದಿನಾಂಕ 07–02–2024 ರ ಒಳಗಾಗಿ ತಯಾರಿಸಿ ಮಾನ್ಯ ಅಧ್ಯಕ್ಷರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಯವರು ದಕ್ಷಿಣ ಕನ್ನಡ ಜಿಲ್ಲೆ ಇವರಿಂದ ಅನುಮೋದನೆಯನ್ನು ಪಡೆದು ಸರಕಾರದ ಅನುಮೋದನೆಗೆ ಕಳುಹಿಸಲು ತೀರ್ಮಾನಿಸಲಾಯಿತು.

**ಕ್ರಮ: ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**ವಿಷಯ ಸಂಖ್ಯೆ 4 : ಪ್ರಾಧಿಕಾರಕ್ಕೆ ಅವಶ್ಯಕವಾಗುವ ಅಧಿಕಾರಿ ಮತ್ತು ಸಿಬ್ಬಂದಿ ಹುದ್ದೆಗಳ ಸೃಜನೆ, ನೇಮಕಾತಿ ವಿಧಾನ ಮತ್ತು ಸೇವಾ ಷರತ್ತುಗಳನ್ನು ರೂಪಿಸುವ ಕುರಿತು.**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ ಕಲಂ 16 ಮತ್ತು 17ರಡಿ ಪ್ರಾಧಿಕಾರದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಿಬ್ಬಂದಿ ಬಲ ಸೃಜಿಸಲು, ವಿದ್ಯಾರ್ಹತೆ, ಮೀಸಲಾತಿ ಹಾಗೂ ವೇತನ ಶ್ರೇಣಿಗಳನ್ನು ನಿಗಧಿಪಡಿಸಿ ನೇಮಕಾತಿ ಕರಡು ನಿಯಮಗಳನ್ನು ತಯಾರಿಸಿ ಪ್ರಾಧಿಕಾರದ ಮುಂದಿನ ಸಭೆಗೆ ಮಂಡಿಸಲು ದಿನಾಂಕ 5–9–2022 ರ ಪ್ರಾಧಿಕಾರದ ಪ್ರಥಮ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ನಿರ್ಣಯದಂತೆ ಕ್ರಮಕೈಗೊಳ್ಳಲಾಗುತ್ತಿದ್ದು, ಅಧಿಕಾರಿ ಮತ್ತು ಸಿಬ್ಬಂದಿ ಹುದ್ದೆಗಳ ವಿವರಗಳ ಕರಡನ್ನು ತಯಾರಿಸಲಾಗಿದೆ. ಪ್ರಾಧಿಕಾರದ ಅನುಮೋದನೆ ಪಡೆದು ತದನಂತರ ಸರ್ಕಾರದ ಅನುಮೋದನೆಗೆ ಕಳುಹಿಸಲಾಗುವುದು.

ಈ ವಿಚಾರವನ್ನು ಸಭೆಯ ಗಮನಕ್ಕೆ ತರಲಾಗಿದೆ.

**ನಿರ್ಣಯ:** ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ ಕಲಂ 16 ಮತ್ತು 17ರಡಿ ಪ್ರಾಧಿಕಾರದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಿಬ್ಬಂದಿ ಬಲ ಸೃಜಿಸಲು, ವಿದ್ಯಾರ್ಹತೆ ಹಾಗೂ ವೇತನ ಶ್ರೇಣಿ, ಖಾಯಂ, ಗುತ್ತಿಗೆ, ಹೊರಗುತ್ತಿಗೆ ಮೂಲಕ ಸಿಬ್ಬಂದಿಗಳನ್ನು ತೆಗೆದುಕೊಳ್ಳುವ ಬಗ್ಗೆ ನಿರ್ಧರಿಸಲು ಈ ಕೆಳಕಾಣಿಸಿದ ಉಪಸಮಿತಿಯನ್ನು ರಚಿಸಲು ಮಾನ್ಯ ಅಧ್ಯಕ್ಷರು ತಿಳಿಸಿದರು.

ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್ ಇವರು ಅರಣ್ಯ ಇಲಾಖೆ, ತೋಟಗಾರಿಕಾ ಇಲಾಖೆ ಮತ್ತು ಇಂಜಿನೀಯರಿಂಗ್ ವಿಭಾಗ ಇತ್ಯಾದಿ ಇಲಾಖೆಯಿಂದ ಪ್ರಾಧಿಕಾರಕ್ಕೆ ಅವಶ್ಯಕವಿರುವ ಅಧಿಕಾರಿಗಳನ್ನು ನಿಯೋಜಿಸಿಕೊಳ್ಳಬಹುದು ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು ಈ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಸಂದರ್ಭದಲ್ಲಿ ಈ ವಿಚಾರದ ಕುರಿತು ಸ್ಪಷ್ಟನೆಯನ್ನು ನೀಡಲು ತಿಳಿಸಿದರು.

**ಉಪಸಮಿತಿ:**

1) ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ
2) ಜನರಲ್ ಮ್ಯಾನೇಜರ್, ಮೆಸ್ಕಾಂ, ಮಂಗಳೂರು

ಇವರು ಜಂಟಿಯಾಗಿ ಕರಡು ನಿಯಮಗಳನ್ನು ತಯಾರಿಸಿ ದಿನಾಂಕ 07–02–2024 ರ ಒಳಗಾಗಿ ಮಾನ್ಯ ಅಧ್ಯಕ್ಷರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಯವರು ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಮಂಡಿಸಲು ತೀರ್ಮಾನಿಸಲಾಯಿತು.

**ಕ್ರಮ: ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**ವಿಷಯ ಸಂಖ್ಯೆ 5: ಪಿಲಿಕುಳ ಜೈವಿಕ ಉದ್ಯಾನವನವನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವ ವಿಚಾರದ ಕುರಿತು.**

ಪಿಲಿಕುಳ ಜೈವಿಕ ಉದ್ಯಾನವನವನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವ ವಿಚಾರದ ಕುರಿತು ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 13–10–2023 ರಂದು ಜರಗಿದ ಪ್ರಾಧಿಕಾರದ ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಈ ವಿಚಾರವನ್ನು ಕೂಲಂಕುಷವಾಗಿ ಚರ್ಚಿಸಿ, "ಪ್ರಾಧಿಕಾರದ ಸಮಸ್ಯೆಗಳನ್ನು ಮತ್ತು ಜೈವಿಕ ಉದ್ಯಾನವನದ ದಿನನಿತ್ಯದ ನಿರ್ವಹಣೆಗಾಗಿ ಅಗತ್ಯವಿರುವ ತಾಂತ್ರಿಕ ಸಹಾಯವನ್ನು ಅರಣ್ಯ ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆಗಳಿಂದ ಪಡೆದುಕೊಂಡು ತದನಂತರ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ಸೂಕ್ತ ನಿರ್ಧಾರಗಳೊಂದಿಗೆ ರಾಜ್ಯ ಮಟ್ಟದ ಸಲಹಾ ಸಮಿತಿಗೆ ವರದಿಯನ್ನು ಸಲ್ಲಿಸಲು ನಿರ್ಧರಿಸಲಾಗಿದೆ".

ಆದ್ದರಿಂದ ಈ ವಿಚಾರದ ಕುರಿತು ಚರ್ಚೆ ಮತ್ತು ನಿರ್ಧಾರಕ್ಕಾಗಿ ಮಂಡಿಸಿದೆ.

**ನಿರ್ಣಯ:** ಕೇಂದ್ರ ಮೃಗಾಲಯ ಪ್ರಾಧಿಕಾರದ ತಾಂತ್ರಿಕ ಸಮಿತಿಯ ನಿರ್ದೇಶನದಂತೆ (ಪತ್ರ ಸಂ.23-1/97CZA(385)(Vol-IV)(E) ದಿನಾಂಕ 7–12–2022) ಹಾಗೂ ನಿರ್ದೇಶಕರು, ಜೈವಿಕ ಉದ್ಯಾನವನ ಇವರ ಕೋರಿಕೆಯನ್ವಯ ದೊಡ್ಡ ಮೃಗಾಲಯಗಳ ಸಾಲಿಗೆ ಸೇರಿರುವ ಪಿಲಿಕುಳ ಜೈವಿಕ ಉದ್ಯಾನವನದ ಪ್ರಾಣಿಗಳ ಪಾಲನೆ, ಪೋಷಣೆ ಹಾಗೂ ನಿರ್ವಹಣೆಗೆ ಹಣಕಾಸಿನ ಮತ್ತು ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ಮಾನವ–ವನ್ಯಜೀವಿ ಸಂಘರ್ಷವನ್ನು ಸಮರ್ಪಕವಾಗಿ ಪರಿಹರಿಸಿ ಉತ್ತಮ ಸಮನ್ವಯ ಕಾಯ್ದುಕೊಳ್ಳಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಮತ್ತು ಮುಖ್ಯಜೀವಿ ಪರಿಪಾಲಕರು, ಕರ್ನಾಟಕ ಸರಕಾರ ಇವರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಾಣಿಗಳ ಸಂರಕ್ಷಣೆ ಮತ್ತು ಸ್ಥಳಾಂತರಿಸುವ ದೃಷ್ಟಿಯಿಂದ ಪಿಲಿಕುಳ ಜೈವಿಕ ಉದ್ಯಾನವನವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ಇವರಿಗೆ ಹಸ್ತಾಂತರಿಸಲು ಪತ್ರ ಸಂಖ್ಯೆ ಪ್ರ.ಮುಅಸಂ(ವಜೀ)/ಎಫ್/ಸಿಆರ್:10/2023–24 ದಿನಾಂಕ 30–05–2023 ರಂತೆ ನಿರ್ದೇಶನ ನೀಡಿರುವ ವಿಚಾರವನ್ನು ದಿನಾಂಕ 13–10–2023 ರಂದು ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿದೆ. ಈ ವಿಚಾರವನ್ನು ಮುಂದಿನ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸೂಕ್ತ ನಿರ್ಧಾರಗಳೊಂದಿಗೆ ರಾಜ್ಯ ಮಟ್ಟದ ಸಲಹಾ ಸಮಿತಿಗೆ ವರದಿಯನ್ನು ಸಲ್ಲಿಸಲು ನಿರ್ಧರಿಸಿರುವ ವಿಚಾರವನ್ನು ಸಭೆಯ ಗಮನಕ್ಕೆ ತರಲಾಯಿತು.

ಮಾನ್ಯ ಶಾಸಕರು, ಮೂಡಬಿದ್ರೆ ಕ್ಷೇತ್ರ ಇವರು ಜೈವಿಕ ಉದ್ಯಾನವನದ ನಿರ್ದೇಶಕರ ಹುದ್ದೆಗೆ ಕನಿಷ್ಠ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೇಣಿಯ ಅಧಿಕಾರಿಯನ್ನು ನಿಯೋಜಿಸಬೇಕೆಂದು ಮಾನ್ಯ ಅಧ್ಯಕ್ಷರಿಗೆ ತಿಳಿಸಿದರು. ಈ ಸಂಬಂಧ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೇಣಿಯ ಅಧಿಕಾರಿಯನ್ನು ನೇಮಿಸಲು ಸರಕಾರದ ಮಟ್ಟದಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್ ಇವರು ಸಭೆಗೆ ತಿಳಿಸಿದರು. ಈ ವಿಚಾರದ ಕುರಿತು ಚರ್ಚಿಸಲಾಗಿ ಜೈವಿಕ ಉದ್ಯಾನವನವನ್ನು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಡಿಯಲ್ಲಿ ಮುಂದುವರಿಸಿಕೊಂಡು ಹೋಗುವುದು ಸೂಕ್ತವೆಂದು ಅಭಿಪ್ರಾಯ ಪಡಲಾಯಿತು.

ಜೈವಿಕ ಉದ್ಯಾನವನಕ್ಕೆ ಅಗತ್ಯವಿರುವ ನಿರ್ದೇಶಕರ ಹುದ್ದೆಗೆ ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಅಥವಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶ್ರೇಣಿಯ ಅಧಿಕಾರಿಯನ್ನು ಸೂಕ್ತ ಅಧಿಕಾರದ ವಿನಿಯೋಗವನ್ನು ರೂಪಿಸಿಕೊಂಡು ಮತ್ತು ಕೇಂದ್ರ ಮೃಗಾಲಯ ಪ್ರಾಧಿಕಾರವು ಸೂಚಿಸಿರುವ ಸಂರಕ್ಷಣೆ ಹಾಗೂ ಪಾಲನೆಗೆ ಸಂಬಂಧಿಸಿದ ಜವಾಬ್ದಾರಿಗಳನ್ನು ವಹಿಸಿ ಅರಣ್ಯ ಇಲಾಖೆಯಿಂದ ನಿಯೋಜಿಸಿಕೊಳ್ಳುವುದೆಂದು ಅಥವಾ ಪೂರ್ಣಕಾಲಿನ ಅಧಿಕಾರಿಯನ್ನು ನೇಮಕಾತಿ ಮಾಡಲು ಸರ್ಕಾರಕ್ಕೆ ಕೋರುವುದೆಂದು ತೀರ್ಮಾನಿಸಲಾಯಿತು.

**ಕ್ರಮ: ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**ವಿಷಯ ಸಂಖ್ಯೆ 6: ಮೆ:ಜಿ.ಎಂ. ಅಮ್ಯೂಸ್‌ಮೆಂಟ್ ಪಾರ್ಕ್ ವತಿಯಿಂದ ಮೆರೈನ್ ವರ್ಲ್ಡ್ ಪ್ರಾಜೆಕ್ಟ್ (Marine World Project ) ಗೆ ಅನುಮತಿ ಕೋರಿರುವ ವಿಚಾರದ ಕುರಿತು.**

ವ್ಯವಸ್ಥಾಪಕ ನಿರ್ದೇಶಕರು, ಮೆ:ಜಿ.ಎಂ.ಅಮ್ಯೂಸ್‌ಮೆಂಟ್ ಅಂಡ್ ಲೀಶರ್ ಪಾರ್ಕ್ ಲಿ., ಇವರು ತಮ್ಮ ದಿ: 21–10–20223 ರ ಪತ್ರದಲ್ಲಿ ಜಿ.ಎಂ.ಎ.ಎಲ್.ಪಿ. ಮೂಲಕ CISO Institute of Oceanic Studies Pvt. Ltd., Kerala ರವರು ರೂ.50.00 ಕೋಟಿ ವೆಚ್ಚದಲ್ಲಿ Marine World Project ನ್ನು ಅನುಷ್ಠಾನಿಸಲು ಮುಂದೆ ಬಂದಿರುವುದಾಗಿ ತಿಳಿಸಿ ಪ್ರಾಧಿಕಾರದ ಒಪ್ಪಿಗೆ ಪತ್ರವನ್ನು ಕೋರಿಕೊಂಡಿದ್ದು, ಮೆ: ಜಿ.ಎಂ. ಅಮ್ಯೂಸ್‌ಮೆಂಟ್ ಅಂಡ್ ಲೀಶರ್ ಪಾರ್ಕ್‌ನ ಗುತ್ತಿಗೆ ಅವಧಿಯ ವಿಸ್ತರಣೆಯನ್ನು ಅವಲೋಕಿಸಿಕೊಂಡು ಅನುಮತಿ ನೀಡುವುದಾಗಿ ದಿ:25.10.2022 ರ ಪತ್ರದಲ್ಲಿ ತಿಳಿಸಲಾಗಿದೆ.

ಸರ್ಕಾರದ ಪತ್ರ ಸಂ.ಆರ್‌ಡಿ 29 ಎಲ್‌ಜಿಎ 2002 ದಿ:26.3.2002 ಮತ್ತು ಮಾನ್ಯ ಜಿಲ್ಲಾಧಿಕಾರಿಯವರ ಕಚೇರಿಯ ನಡವಳಿ ಸಂ.ಎಡಿಸ್.ಎಲ್‌ಎನ್‌ಡಿ(1).ಪಿಡಿಆರ್:331/2001–02 ದಿ:10.4.2002 ರಂತೆ "ಫನ್ ವರ್ಲ್ಡ್" ಯೋಜನೆಗೆ ಉಪಗುತ್ತಿಗೆ ನೀಡಲು ಅನುಮೋದನೆ ನೀಡಿರುವ 20 ವರ್ಷಗಳ ಅವಧಿಯು ಏಪ್ರಿಲ್ 2022 ಕ್ಕೆ ಮುಕ್ತಾಯಗೊಂಡಿರುತ್ತದೆ. ಆದರೆ, ಮೆ: ಜಿ.ಎಂ. ಅಮ್ಯೂಸ್‌ಮೆಂಟ್ ಅಂಡ್ ಲೀಸರ್ ಪಾರ್ಕ್ ಸಂಸ್ಥೆಯವರು "ಫನ್ ವರ್ಲ್ಡ್" ಯೋಜನೆಯ ಅಭಿವೃದ್ಧಿಗೆ ಬಹಳಷ್ಟು ಮೊತ್ತವನ್ನು ವಿನಿಯೋಗಿಸಲಾಗಿದ್ದು 20 ವರ್ಷಗಳ ಅವಧಿಯಲ್ಲಿ ಯಾವುದೇ ಲಾಭದ ನಿರೀಕ್ಷೆ ಮಾಡದಿರುವುದರಿಂದ, ಮುಂದಿನ ಅವಧಿಗೆ ಉಪ ಗುತ್ತಿಗೆಯನ್ನು ವಿಸ್ತರಣೆ ಮಾಡಲು ಕೋರಿಕೊಂಡಿರುವುದಲ್ಲದೆ ಈ ಜಮೀನಿನಲ್ಲಿ ಅಂದಾಜು ರೂ.50.00 ಕೋಟಿ ವೆಚ್ಚದಲ್ಲಿ 'ಮರೈನ್ ವಾಟರ್ ಪಾರ್ಕ್' ಯೋಜನೆಯನ್ನು CISO ಸಂಸ್ಥೆಯ ಜಂಟಿ ಸಹಭಾಗಿತ್ವದಲ್ಲಿ ನಡೆಸುವ ಪ್ರಸ್ತಾವನೆ ಇದೆ ಎಂದು ತಿಳಿಸಿರುತ್ತಾರೆ.

ಪ್ರಸ್ತುತ ಸರಕಾರದ ಅಧಿಸೂಚನೆಯಂತೆ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವಾಗಿ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದ್ದು ಇಂತಹ ಯೋಜನೆಯು ಸುತ್ತಮುತ್ತಲೂ ಎಲ್ಲಿಯೂ ಇರುವುದಿಲ್ಲ. 'ಫನ್ ವರ್ಲ್ಡ್' ಅಭಿವೃದ್ಧಿ ಉಪ ಗುತ್ತಿಗೆಗೆ ನೀಡುವುದರಿಂದ ಬರುವ ಆದಾಯವು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಸಮಗ್ರ ಅಭಿವೃದ್ಧಿಗೆ ಬೇಕಾಗುತ್ತದೆ. ಇದರಿಂದ, ಪಿಲಿಕುಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುವ ಸಾಧ್ಯತೆ ಕೂಡಾ ಇರುವುದರಿಂದ 15 ಎಕ್ರೆ ಜಮೀನನ್ನು ಮುಂದಿನ ಅವಧಿಗೆ ಉಪಗುತ್ತಿಗೆಗೆ ನೀಡುವ ಬಗ್ಗೆ ಎಕರೆ ಒಂದಕ್ಕೆ ಶುಲ್ಕ ರೂ.100/– ನ್ನು ವಿಧಿಸಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಪೂರ್ವಾನುಮೋದನೆ ನೀಡಲು ಸರಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ.

ಲೀಸ್ ಅವಧಿಯನ್ನು ಮುಂದುವರಿಸುವುದಾದಲ್ಲಿ ಜಮೀನು ಮಾರುಕಟ್ಟೆಯ ಮಾರ್ಗಸೂಚಿಯಂತೆ ಸ್ಥಳದ ಭೂಮೌಲ್ಯವನ್ನು ಪರಿಶೀಲಿಸಲಾಗಿದ್ದು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 22–3 ರಂತೆ ಮಾರ್ಗಸೂಚಿ ಮೌಲ್ಯದ ಶೇ. 2.5 ರಂತೆ ವಾರ್ಷಿಕ ಲೀಸ್ ದರ 15 ಎಕರೆಗೆ ಒಟ್ಟು ರೂ.51.60 ಲಕ್ಷ ಬರುತ್ತದೆ. ಇದು ಈ ಹಿಂದೆ ನಿಗಧಿಪಡಿಸಿರುವ ವಾರ್ಷಿಕ ಲೈಸೆನ್ಸ್ ಶುಲ್ಕ ರೂ. 3.75 ಲಕ್ಷಕ್ಕಿಂತ 13 ಪಟ್ಟು ಹೆಚ್ಚಾಗುತ್ತದೆ.

ಈ ವಿಚಾರವನ್ನು ಪ್ರಾಧಿಕಾರದ ಅವಗಾಹನೆಗೆ ಮತ್ತು ನಿರ್ಧಾರಕ್ಕೆ ಒಪ್ಪಿಸಿದೆ.

**ನಿರ್ಣಯ:** ಸರಕಾರದ ಜಮೀನನ್ನು ಲೀಸ್‌ಗೆ ನೀಡುವುದಾದಲ್ಲಿ ಲೀಸ್ ದರವು ಪ್ರತಿ ಎಕರೆಗೆ ಸರಕಾರವು ನಿಗಧಿಪಡಿಸಿರುವ ಭೂಮಿಯ ಮಾರ್ಗಸೂಚಿ ದರಕ್ಕಿಂತ (Land Lease Value) ಕಡಿಮೆ ಇರಬಾರದು. ಸರಕಾರದ ಭೂಮಿಯನ್ನು ಲೀಸ್‌ಗೆ ನೀಡುವ ವಿಚಾರದಲ್ಲಿ ಕಂದಾಯ ಇಲಾಖೆಯಲ್ಲಿರುವ ನಿಯಮಗಳನ್ನು ಅನುಸರಿಸಿಕೊಂಡು ಆದಾಯದ 50:50 ಅನುಪಾತದಂತೆ ಹಂಚಿಕೆ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸಬಹುದು ಎಂದು ಅಭಿಪ್ರಾಯಕ್ಕೆ ಬರಲಾಯಿತು. ಭೂಮಿಯನ್ನು ಲೀಸ್‌ಗೆ ನೀಡುವ ಮೊದಲು ಸದ್ರಿ ಸ್ಥಳವು ಕಂದಾಯ ಇಲಾಖೆಯಡಿ ಬರುತ್ತದೊ ಅಥವಾ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಡಿ ಬರುತ್ತದೊ ಎಂಬ ಬಗ್ಗೆ ಹಾಗೂ ಅನುಸರಿಸಬೇಕಾದ ಮಾನದಂಡ/ಸಲಹೆಯನ್ನು ಕಾನೂನು ತಜ್ಞರಿಂದ ಪಡೆದು ಮುಂದಿನ ಕ್ರಮ ತೆಗೆದುಕೊಳ್ಳಲು ನಿರ್ಧರಿಸಲಾಯಿತು.

**ಕ್ರಮ: ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಮತ್ತು ಯೋಜನಾ ಅಭಿಯಂತರರು**

<u>ವಿಷಯ ಸಂಖ್ಯೆ 7: ಕಾಟೇಜು ಮತ್ತು ಆಯುರ್ವೇದ ಥೆರಪಿ ಸೆಂಟರ್ ಕಟ್ಟಡಗಳನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರು ವಹಿಸಿಕೊಂಡಿರುವ ವಿಚಾರದ ಕುರಿತು.</u>

ಪರಿಸರ ಸಹ್ಯ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಪ್ರಾಧಿಕಾರಕ್ಕೆ ಸೇರಿದ ಅತಿಥಿ ಗೃಹ ಹಾಗೂ ಆಯುರ್ವೇದಿಕ್ ಕೇಂದ್ರವನ್ನು ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ(ನಿ), ಬೆಂಗಳೂರು ಇವರಿಗೆ 30 ವರ್ಷಗಳಿಗೆ ಲೀಸ್ ಡೀಡ್ ನಿರ್ವಹಿಸಿಕೊಂಡು ವಹಿಸಲಾಗಿದ್ದು ಕರಾರು ನಿಬಂಧನೆ ಉಲ್ಲಂಘಿಸಿರುವುದರಿಂದ ಪೂರಕ ಶೆಡ್ಯೂಲ್ ಸೊತ್ತುಗಳೊಂದಿಗೆ ವಾಪಾಸ್ಸು ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ(ನಿ), ಬೆಂಗಳೂರು ಇವರಿಗೆ ಈ ಕಚೇರಿಯಿಂದ ಪತ್ರಗಳನ್ನು ಬರೆಯಲಾಗಿದ್ದು ಈ ವಿಚಾರಕ್ಕೆ ಸಂಬಂಧಿಸಿ ಅಪರ ಮುಖ್ಯ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ಇವರ ಕಚೇರಿಯಲ್ಲಿ ದಿ:3.3.2023 ರಂದು ಸಭೆ ನಡೆಸಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಕೋರಿಕೆಯಂತೆ ಅತಿಥಿ ಗೃಹ ಮತ್ತು ಆಯುರ್ವೇದಿಕ್ ಕೇಂದ್ರವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಒಪ್ಪಿಗೆ ಸೂಚಿಸಿದ್ದು, ಈ ಯೋಜನೆಯ ಅಭಿವೃದ್ಧಿ ಕೆಲಸಗಳಿಗೆ ಈಗಾಗಲೇ ಒಟ್ಟು 623.95 ಲಕ್ಷವನ್ನು ಹೂಡಿಕೆ ಮಾಡಿರುವುದರಿಂದ, 2 ಲೀಸ್ ಗುತ್ತಿಗೆಗಳ ಅವಧಿಯ ಅಂತ್ಯದವರೆಗೆ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವು ನಡೆಸಿ ಸ್ವೀಕೃತವಾಗುವ ವಾರ್ಷಿಕ ಲಾಭಾಂಶದಲ್ಲಿ ಶೇ.40 ರಷ್ಟನ್ನು ಜೆ.ಎಲ್.ಆರ್. ಸಂಸ್ಥೆಗೆ ನೀಡಬೇಕೆಂದೂ ಮತ್ತು ವಿಚಾರದಲ್ಲಿ ಮಾನ್ಯ ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರೊಡನೆ ಸಂವಹನ ನಡೆಸಿ ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯ ಪ್ರಸ್ತಾವನೆಯನ್ನು ಶಿಫಾರಸ್ಸಿನೊಂದಿಗೆ ಸರ್ಕಾರದ ಅನುಮೋದನೆಗೆ ಕಳುಹಿಸಿಕೊಡಬೇಕೆಂದು ಕೋರಿರುತ್ತಾರೆ.

ಈ ಮಧ್ಯೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರು ಪಿಲಿಕುಳದ ಮೇಲಿನ ಸೊತ್ತುಗಳನ್ನು ನಡೆಸಲು ಒಪ್ಪಿಕೊಂಡು ಸೊತ್ತುಗಳನ್ನು ಹಸ್ತಾಂತರಿಸಲು ಕೋರಿಕೊಂಡಿರುವ ವಿಚಾರವಾಗಿ ಮೆ: ಜಂಗಲ್ ಲಾಡ್ಜಸ್ ರಿಸಾರ್ಟ್ಸ್ ಸಂಸ್ಥೆಯ ನಿರ್ದೇಶಕರುಗಳ ಮಂಡಳಿ ಸಭೆಯಲ್ಲಿ (ದಿ:24.7.2023 ರಂದು) ಚರ್ಚಿಸಲಾಗಿ ಸದ್ರಿ ಸೊತ್ತುಗಳನ್ನು ಮುಖಾಂತರ ನಡೆಸಲು ಹಸ್ತಾಂತರಿಸುವುದೆಂದು ಸರ್ವಾನುಮತದಿಂದ ಅಂಗೀಕರಿಸಿಕೊಂಡು ದಿ:31.8.2023 ರಂದು ಕಟ್ಟಡಗಳನ್ನು ಯಥಾಸ್ಥಿತಿಯಲ್ಲಿ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ಹಸ್ತಾಂತರಿಸಿರುತ್ತಾರೆ.

ಲೀಸ್ ಡೀಡ್‌ಗೆ ಸಂಬಂಧಿಸಿ ಮೆ: ಜಂಗಲ್ ಲಾಡ್ಜಸ್ ರಿಸಾರ್ಟ್ಸ್ ಸಂಸ್ಥೆಯು 2015–16 ನೇ ಸಾಲಿನಿಂದ 2022–23 ನೇ ಸಾಲಿನವರೆಗೆ ಒಟ್ಟು ರೂ.31.51 ಲಕ್ಷವನ್ನು (ಆದಾಯ ತೆರಿಗೆ ಸೇರಿ) ಪಿಲಿಕುಳಕ್ಕೆ ಪಾವತಿ ಮಾಡಿರುತ್ತಾರೆ.

ಈಗ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದೊಂದಿಗೆ ಕರಾರನ್ನು ನಿರ್ವಹಿಸಿಕೊಳ್ಳಲು ಕ್ರಮವಹಿಸಲಾಗಿದೆ. ಈ ವಿಚಾರವನ್ನು ಸಭೆಯ ಅವಗಾಹನೆಗೆ ಮತ್ತು ನಿರ್ಧಾರಕ್ಕಾಗಿ ಮಂಡಿಸಿದೆ.

<u>ನಿರ್ಣಯ:</u> ಕಾಟೇಜು ಮತ್ತು ಆಯುರ್ವೇದ ಥೆರಪಿ ಸೆಂಟರ್ ಕಟ್ಟಡಗಳನ್ನು ಮೆ. ಜಂಗಲ್ ಲಾಡ್ಜಸ್ ಆಂಡ್ ರೆಸಾರ್ಟ್ಸ್‌ನಿಂದ ಹಿಂದಕ್ಕೆ ಪಡೆಯುವ ವಿಚಾರವಾಗಿ ದಿ: 3–3–2003 ರಂದು ಅಪರ ಮುಖ್ಯ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ಇವರ ಕಛೇರಿಯಲ್ಲಿ ಜರುಗಿದ ಸಭೆಯಲ್ಲಿ ಸದ್ರಿ ಸೊತ್ತುಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಒಪ್ಪಿಗೆ ಸೂಚಿಸಿದ್ದು, ಈಗಾಗಲೇ ಅಭಿವೃದ್ಧಿ ಕೆಲಸಗಳಿಗೆ ರೂ. 623.95 ಲಕ್ಷವನ್ನು ಮೆ. ಜಂಗಲ್ ಲಾಡ್ಜಸ್ ಆಂಡ್ ರೆಸಾರ್ಟ್ಸ್ ಸಂಸ್ಥೆಯವರು ವಿನಿಯೋಗಿಸಿರುವುದರಿಂದ ಲೀಸ್ ಗುತ್ತಿಗೆ ಅವಧಿಯವರೆಗೆ (2039) ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವು ನಡೆಸಿ ಸ್ವೀಕೃತವಾಗುವ ವಾರ್ಷಿಕ ಲಾಬಾಂಶದಲ್ಲಿ ಶೇ. 40 ರಷ್ಟನ್ನು ಮೆ. ಜಂಗಲ್ ಲಾಡ್ಜಸ್ ಆಂಡ್ ರೆಸಾರ್ಟ್ಸ್ ಸಂಸ್ಥೆಗೆ ನೀಡಬೇಕೆಂದು ನಿರ್ಧರಿಸಿ ಪ್ರಸ್ತಾವನೆಯನ್ನು ಸರಕಾರದ ಅನುಮೋದನೆಗೆ ಕಳುಹಿಸಿಕೊಡಲು ಸೂಚಿಸಲಾಗಿತ್ತು. ತದನಂತರ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (KSTDC) ಸಂಸ್ಥೆಯು ದಿನಾಂಕ 24–07–2023 ರಂದು ಜರುಗಿದ ನಿರ್ದೇಶಕರುಗಳ ಮಂಡಳಿ ಸಭೆಯಲ್ಲಿ ಪ್ರಾಧಿಕಾರದಿಂದ ಮೆ: ಜಂಗಲ್ ಲಾಡ್ಜಸ್ ರಿಸಾರ್ಟ್ಸ್ ಸಂಸ್ಥೆಗೆ ನೀಡಿರುವ ಕಾಟೇಜು ಮತ್ತು ಆಯುರ್ವೇದ ಥೆರಪಿ ಸೆಂಟರ್ ಕಟ್ಟಡಗಳನ್ನು ನಡೆಸಲು ಒಪ್ಪಿಕೊಂಡಿದ್ದು, ದಿ:31.8.2023

ರಂದು ಸದ್ರಿ ಸೊತ್ತುಗಳನ್ನು ವಹಿಸಿಕೊಂಡಿರುವ ವಿಚಾರವನ್ನು ಸಭೆಯ ಗಮನಕ್ಕೆ ತರಲಾಯಿತು, ಮತ್ತು ಈ ಬಾಬ್ತು KSTDC ಸಂಸ್ಥೆಯೊಂದಿಗೆ ನಿರ್ವಹಿಸಬೇಕಾದ ಕರಾರಿನ ಕರಡನ್ನು ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ನೀಡಿ ಅಭಿಪ್ರಾಯವನ್ನು ಕೋರಲಾಯಿತು.

ಮೆ: ಜಂಗಲ್ ಲಾಡ್ಜಸ್ ರಿಸಾರ್ಟ್ಸ್ ಸಂಸ್ಥೆಯಿಂದ 2009–10 ರಿಂದ 2022–23 ನೇ ಸಾಲಿನವರೆಗೆ ಎಂ.ಓ.ಯು. ಒಪ್ಪಂದದಂತೆ ಆಡಿಟ್ ವರದಿಯನ್ವಯ ಪ್ರಾಧಿಕಾರಕ್ಕೆ ಬರಬೇಕಾದ ಒಟ್ಟು ಲಾಭಾಂಶವನ್ನು ಪರಿಶೀಲಿಸಿಕೊಂಡು, ಪ್ರಾಧಿಕಾರಕ್ಕೆ ಪಾವತಿಸಲು ಕೋರಿ ಪತ್ರ ಬರೆಯಲು ಮಾನ್ಯ ಅಧ್ಯಕ್ಷರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರು ಸೂಚಿಸಿದರು.

**ಕ್ರಮ: ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಮತ್ತು ಯೋಜನಾ ಅಭಿಯಂತರರು**

**<u>ವಿಷಯ ಸಂಖ್ಯೆ 8 : ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳ ತುಟ್ಟಿಭತ್ಯೆ (DA) ಯನ್ನು ಪರಿಷ್ಕರಿಸಿ ನೀಡುವ ಕುರಿತು.</u>**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ತುಟ್ಟಿಭತ್ಯೆಯನ್ನು 6 ವರ್ಷಗಳ ಹಿಂದೆ ಅಂದರೆ 1–4–2018 ರಲ್ಲಿ ಪರಿಷ್ಕರಿಸಿದ್ದು, ತದನಂತರ ಕೋವಿಡ್‌ನಿಂದಾಗಿ ಆರ್ಥಿಕ ತೊಂದರೆ ಉಂಟಾದ ಕಾರಣದಿಂದ ತದನಂತರ ಈವರೆಗೆ ತುಟ್ಟಿಭತ್ಯೆಯನ್ನು ಹೆಚ್ಚಿಸಿರುವುದಿಲ್ಲ. ಈ ವಿಚಾರದ ಕುರಿತು ದಿನಾಂಕ 5–9–2022 ರಂದು ಜರಗಿದ ಪ್ರಾಧಿಕಾರದ ಪ್ರಥಮ ಸಭೆಯಲ್ಲಿ ಚರ್ಚಿಸಲಾಗಿ ತುಟ್ಟಿಭತ್ಯೆಯನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಮುಂದಿನ ಸಭೆಯಲ್ಲಿ ನಿರ್ಣಯಿಸಲು ತೀರ್ಮಾನಿಸಲಾಗಿದೆ.

ಪ್ರಾಧಿಕಾರವು ಎಪ್ರಿಲ್–2021 ರಿಂದ ಪೂರ್ಣ ಪ್ರಮಾಣದಲ್ಲಿ ಕಾರ್ಯರೂಪಗೊಂಡರೂ ಸಿಬ್ಬಂದಿ ಹುದ್ದೆಗಳ ಸೃಜನೆ, ವೇತನ ನಿಗಧಿ ಇತ್ಯಾದಿಗಳು ಇನ್ನೂ ಕಾರ್ಯರೂಪಕ್ಕೆ ಬರದೆ ಇರುವುದರಿಂದ ಹಾಗೂ ಪ್ರಸ್ತುತ ಮಾರುಕಟ್ಟೆಯಲ್ಲಿ ಎಲ್ಲಾ ದರಗಳು ದುಬಾರಿಯಾಗಿರುವುದರಿಂದ ಸಿಬ್ಬಂದಿಗಳಿಗೆ ತುಟ್ಟಿಭತ್ಯೆಯನ್ನು ಹೆಚ್ಚಿಸುವಂತೆ ಸಿಬ್ಬಂದಿಗಳು ಮನವಿಯಲ್ಲಿ ಕೋರಿಕೊಂಡಿರುತ್ತಾರೆ.

ಆದ್ದರಿಂದ ತುಟ್ಟಿಭತ್ಯೆಯನ್ನು ಹೆಚ್ಚಿಸುವುದು ಅಥವಾ ಮಧ್ಯಂತರ ಪರಿಹಾರ ಭತ್ಯೆಯನ್ನು ನೀಡುವ ಕುರಿತು ಸಭೆಯ ನಿರ್ಧಾರಕ್ಕಾಗಿ ಮಂಡಿಸಿದೆ.

**<u>ನಿರ್ಣಯ:</u>** ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ ಎಪ್ರಿಲ್–2018 ರಲ್ಲಿ ತುಟ್ಟಿಭತ್ಯೆಯನ್ನು ಪರಿಷ್ಕರಿಸಿ ನೀಡಿದ್ದು, ತದನಂತರ ಹೆಚ್ಚಿಸದೇ ಇರುವುದರಿಂದ ಸದರಿ ಸಿಬ್ಬಂದಿಗಳಿಗೆ 5% ಅಥವಾ 10% DA ಹೆಚ್ಚಿಸುವ ವಿಚಾರವಾಗಿ ಚರ್ಚಿಸಲಾಯಿತು.

ಈ ಹಿಂದಿನ ಪಿಲಿಕುಳ ನಿಸರ್ಗಧಾಮ ಸೊಸೈಟಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಖಾಯಂ ಸಿಬ್ಬಂದಿಗಳಿಗೆ ತುಟ್ಟಿಭತ್ಯೆಯನ್ನು ಹೆಚ್ಚಿಸಲು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರು ಮುಂದಿನ ಒಂದು ತಿಂಗಳೊಳಗೆ ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್, ಬೆಂಗಳೂರು ಇವರೊಂದಿಗೆ ಚರ್ಚಿಸಿಕೊಂಡು ಬಾಕಿ ಇರುವ (arrears) ತುಟ್ಟಿಭತ್ಯೆ (DA) ಯನ್ನು ಅಥವಾ ಮಧ್ಯಂತರ ಪರಿಹಾರ ಭತ್ಯೆಯನ್ನು ಪ್ರಾಧಿಕಾರದ ಸ್ವಂತ ಆದಾಯದಿಂದ ನೀಡುವ ಕುರಿತು ಕ್ರಮ ತೆಗೆದುಕೊಳ್ಳಲು ನಿರ್ಧರಿಸಲಾಯಿತು.

**ಕ್ರಮ: ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**ವಿಷಯ ಸಂಖ್ಯೆ 9: ಪ್ರಾದೇಶಿಕ ವಿಜ್ಞಾನ ಕೇಂದ್ರದ ಗ್ಯಾಲರಿಗಳಲ್ಲಿ ಹಾಗೂ ಪಾರ್ಕ್‌ನಲ್ಲಿ ಇರುವ ಮಾದರಿಗಳ ಹಾಗೂ ಪ್ರಾತ್ಯಕ್ಷಿಕೆಗಳ ದುರಸ್ತಿಯನ್ನು ಜರೂರಾಗಿ ಕೈಗೆತ್ತಿಕೊಳ್ಳಲು ಮುಂಗಡವಾಗಿ ನೀಡಿರುವ ರೂ.1.00ಲಕ್ಷಕ್ಕೆ ಘಟನೋತ್ತರ ಮಂಜೂರಾತಿ ನೀಡುವ ಕುರಿತು.**

ಪ್ರಾದೇಶಿಕ ವಿಜ್ಞಾನ ಕೇಂದ್ರದ ಗ್ಯಾಲರಿಗಳಲ್ಲಿ ಹಾಗೂ ಪಾರ್ಕ್‌ಗಳಲ್ಲಿ ಇರುವ ಮಾದರಿಗಳ ಹಾಗೂ ಪ್ರಾತ್ಯಕ್ಷಿಕೆಗಳ ದುರಸ್ಥಿ ಕೆಲಸಗಳನ್ನು ಅತೀ ತುರ್ತಾಗಿ ಮಾಡಲು ಬಿಡಿಭಾಗಗಳನ್ನು ಖರೀದಿಸಲು ವಿಜ್ಞಾನ ಕೇಂದ್ರದ ಅನುದಾನದಿಂದ ರೂ.1.00 ಲಕ್ಷ ಮುಂಗಡವನ್ನು ದಿನಾಂಕ 19-11-2022 ರಂದು ನೀಡಲಾಗಿತ್ತು. ಸದ್ರಿ ಮೊತ್ತದಲ್ಲಿ ಪ್ರಾತ್ಯಕ್ಷಿಕೆಗಳ ದುರಸ್ಥಿ ಕೆಲಸಗಳನ್ನು ನಿರ್ವಹಿಸಿ ಬಿಲ್ಲುಗಳನ್ನು ನೀಡಿರುತ್ತಾರೆ.

ಈ ಕುರಿತು ಘಟನೋತ್ತರ ಮಂಜೂರಾತಿಗೆ ಮಂಡಿಸಿದೆ.

**ನಿರ್ಣಯ:** ಪ್ರಾದೇಶಿಕ ವಿಜ್ಞಾನ ಕೇಂದ್ರದ ಗ್ಯಾಲರಿಗಳಲ್ಲಿ ಹಾಗೂ ಪಾರ್ಕ್‌ಗಳಲ್ಲಿ ಇರುವ ಮಾದರಿಗಳ ಮತ್ತು ಪ್ರಾತ್ಯಕ್ಷಿಕೆಗಳ ದುರಸ್ತಿಯನ್ನು ಅತೀ ತುರ್ತಾಗಿ ಕೈಗೆತ್ತಿಕೊಳ್ಳಲು ಮತ್ತು ಬಿಡಿಭಾಗಗಳನ್ನು ಖರೀದಿಸಲು ವಿಜ್ಞಾನ ಕೇಂದ್ರದ ಅನುದಾನದಿಂದ ರೂ.1.00 ಲಕ್ಷ ಮುಂಗಡವನ್ನು ದಿ:19-11-2022 ರಂದು ನೀಡಲಾಗಿರುವುದಕ್ಕೆ ಘಟನೋತ್ತರ ಮಂಜೂರಾತಿ ಸಭೆಯಲ್ಲಿ ನೀಡಲಾಯಿತು.

**ವಿಷಯ ಸಂಖ್ಯೆ 10: ಸ್ವಾಮಿ ವಿವೇಕಾನಂದ ತಾರಾಲಯದ ಪ್ರೊಜೆಕ್ಟರ್ ಸಿಸ್ಟಂನ ವಾರ್ಷಿಕ ನಿರ್ವಹಣೆ ಕುರಿತು.**

ಪಿಲಿಕುಳದ ಸ್ವಾಮಿ ವಿವೇಕಾನಂದ ತಾರಾಲಯದ ಟೆಂಡರ್ ಶರ್ತಗಳಂತೆ ಪ್ರೊಜೆಕ್ಟರ್ ಸಿಸ್ಟಂಗಳ ವೆಂಡರ್ ಮೆ॥ಇವಾನ್ಸ್ ಆಂಡ್ ಸದರ್‌ಲ್ಯಾಂಡ್ ಕಂಪ್ಯೂಟರ್ ಕಾರ್ಪೋರೇಷನ್, ಯುಎಸ್‌ಎ ಇವರು ಭಾರತದ ಪ್ರತಿನಿಧಿಯಾದ ಮೆ॥ಇನ್ಫೋವಿಷನ್ ಟೆಕ್ನೋಲಾಜೀಸ್ ಪ್ರೈ.ಲಿ. ಇವರ ಮೂಲಕ ಡಿಜಿಟಲ್ ಮತ್ತು ಆಪ್ಟೋಮೆಕ್ಯಾನಿಕಲ್ ಪ್ರೊಜೆಕ್ಟರ್ ಸಿಸ್ಟಂಗಳ ಸಮಸ್ತ ನಿರ್ವಹಣೆಯನ್ನು ಟೆಂಡರ್ ನಿಬಂಧನೆ ಪ್ರಕಾರ 5 ವರ್ಷಗಳ ಅವಧಿಗೆ ನಿರ್ವಹಣೆ ಮಾಡಿರುತ್ತಾರೆ. ಈ ಅವಧಿಯು ದಿ:28-02-2023 ರಂದು ಮುಕ್ತಾಯಗೊಂಡಿರುತ್ತದೆ.

ತಾರಾಲಯದ ವಾರ್ಷಿಕ ನಿರ್ವಹಣೆಯನ್ನು ನಿರ್ಧರಿಸುವ ಕುರಿತು ಮಾನ್ಯ ಜಿಲ್ಲಾಧಿಕಾರಿಯವರು, ದ.ಕ.ಜಿಲ್ಲೆ ಇವರು ಸಮಿತಿಯೊಂದನ್ನು ರಚಿಸಿದ್ದು ಅದರಂತೆ ದಿ:16-09-2023 ರಂದು ನಡೆದ ತಾರಾಲಯದ ವಾರ್ಷಿಕ ನಿರ್ವಹಣೆಯ 4ನೇ ಸಭೆಯಲ್ಲಿ ತಾರಾಲಯದ ವಾರ್ಷಿಕ ನಿರ್ವಹಣೆಯನ್ನು ಮಾಡಲು ಆಪ್ಟೋ ಮೆಕ್ಯಾನಿಕಲ್ ಘಟಕವನ್ನು ಹೊರತುಪಡಿಸಿ ರೂ.50.65 ಲಕ್ಷ + 18% ಜಿ.ಎಸ್.ಟಿ.ಗೆ ಒಪ್ಪಿಗೆಯಾಗಿರುತ್ತದೆ. ಈ ಕುರಿತು ಘಟನೋತ್ತರ ಮಂಜೂರಾತಿಗಾಗಿ ಮಂಡಿಸಿದೆ.

**ನಿರ್ಣಯ:** ಪಿಲಿಕುಳ ಸ್ವಾಮಿ ವಿವೇಕಾನಂದ ತಾರಾಲಯದ ಟೆಂಡರ್ ಶರ್ತಗಳಂತೆ ಪ್ರೊಜೆಕ್ಟರ್ ಸಿಸ್ಟಂಗಳ ವೆಂಡರ್ ಮೆ॥ ಇವಾನ್ಸ್ ಆಂಡ್ ಸದರ್‌ಲ್ಯಾಂಡ್ ಕಂಪ್ಯೂಟರ್ ಕಾರ್ಪೋರೇಷನ್, ಯುಎಸ್‌ಎ ಇವರು ಡಿಜಿಟಲ್ ಮತ್ತು ಆಪ್ಟೋಮೆಕ್ಯಾನಿಕಲ್ ಪ್ರೊಜೆಕ್ಟರ್‌ಗಳ ಸಮಸ್ತ ನಿರ್ವಹಣೆಯನ್ನು ಕಾಮಗಾರಿ ಪೂರ್ಣಗೊಂಡ ನಂತರದ 5 ವರ್ಷಗಳ ಅವಧಿಗೆ ನಿರ್ವಹಣೆ ಮಾಡಬೇಕಾಗುತ್ತದೆ. ಈ ಅವಧಿಯು 28-02-2023ಕ್ಕೆ ಮುಗಿದಿದೆ.

ತಾರಾಲಯದ ಟೆಂಡರ್ ಶರ್ತಗಳಂತೆ M/s Evans and Sutherland Computer Corporation, USA ಇವರು ತಮ್ಮ ಕಂಪನಿ ಉತ್ಪನ್ನಗಾದ ಡಿಜಿಟಲ್ ಮತ್ತು ಆಪ್ಟೋಮೆಕ್ಯಾನಿಕಲ್ ಪ್ರೊಜೆಕ್ಟರ್ ಸಿಸ್ಟಮ್ ಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ software ಗಳನ್ನು ತಾರಾಲಯದಲ್ಲಿ ಅಳವಡಿಸಿದ್ದು ಈ ಉಪಕರಣಗಳು ಕಂಪನಿಯ ಏಕಸ್ವಾಮ್ಯತೆಗೆ (proprietary items) ಒಳಪಟ್ಟಿದೆ. ಬೇರೆ ಕಂಪನಿಗಳು AMC ಪ್ರಕ್ರಿಯೆಯಲ್ಲಿ ಭಾಗಿಯಾಗುವಂತೆ ಇಲ್ಲ. ತಾರಾಲಯದ ಟೆಂಡರ್ ಶರ್ತ section IV ಪುಟ ಸಂಖ್ಯೆ 55 serial no 9 ರ item - Annual Maintenance

Contract ನಲ್ಲಿ ಇದನ್ನು ಈ ಕೆಳಗಿನಂತೆ ಸ್ಪಷ್ಟಪಡಿಸಲಾಗಿದೆ. "*The tenderer should provide the Annual Maintenance Contract cost which will be applicable after the completion of the five year comprehensive warranty period. The AMC cost should cover all planetarium projection systems, hardware and software*".

ಮೇಲೆ ತಿಳಿಸಿದಂತೆ AMC ಅವಧಿಯಲ್ಲಿ ಹಾಳಾದ ಬಿಡಿ ಭಾಗಗಳನ್ನು ಪೂರೈಸುವುದು, ದುರಸ್ತಿ ಕೆಲಸಗಳನ್ನು ಕೈಗೊಂಡು ಉಪಕರಣಗಳನ್ನು ಸರಿಯಾಗಿ ಕೆಲಸ ನಿರ್ವಹಿಸುವಂತೆ ನೋಡಿಕೊಳ್ಳುವುದು ಕಂಪನಿಯ ಜವಾಬ್ದಾರಿ. ಇದಕ್ಕಾಗಿ ಕಂಪನಿಯು ಬಿಡಿಭಾಗಗಳನ್ನು ತನ್ನ ಸುಪರ್ದಿಯಲ್ಲಿ ಇಟ್ಟುಕೊಳ್ಳಬೇಕಾಗಿದ್ದು AMC ಅವಧಿಯಲ್ಲಿ ಎಲ್ಲಾ ಸೇವೆಯನ್ನು ಉಚಿತವಾಗಿ ನಿರ್ವಹಿಸಬೇಕಾಗುತ್ತದೆ.

ತಾರಾಲಯದಲ್ಲಿ ತಮ್ಮ ಉಪಕರಣಗಳನ್ನು ಅಳವಡಿಸಿರುವ M/s Evans and Sutherland Computer Corporation, USA ಯ ಭಾರತದ ಏಕಮಾತ್ರ ಪ್ರತಿನಿಧಿ ಕಂಪನಿ M/s Infovision Technologies Pvt.ltd, Mumbai ಆಗಿರುತ್ತದೆ. ಈ ಕಂಪನಿಯು USA ಕಂಪನಿಯ ನಿರ್ದೇಶನದಂತೆ ಕೆಲಸ ನಿರ್ವಹಿಸುತ್ತಿದೆ. ಉಪಕರಣಗಳು ಹಾಳಾದಲ್ಲಿ ಅದರ ಬಿಡಿ ಭಾಗಗಳನ್ನು ಪೂರೈಸುವ ಮತ್ತು ಸಮರ್ಪಕವಾಗಿ ಅವುಗಳನ್ನು ಅಳವಡಿಸುವ ನಿರ್ದೇಶನವನ್ನು ಕಂಪನಿ ನೀಡುತ್ತದೆ. ಕಾಲ ಕಾಲಕ್ಕೆ servicing ಸರಿಯಾಗಿ ನಡೆದಿದೆಯೋ ಇಲ್ಲವೋ ಎಂಬುದನ್ನು ತಾರಾಲಯದಲ್ಲಿ ಅಳವಡಿಸಿರುವ optical fibre ಮೂಲಕ ಕಂಪೆನಿಯು ತಿಳಿಯಬಹುದಾಗಿದೆ.

ತಾರಾಲಯದ ವಾರ್ಷಿಕ ನಿರ್ವಹಣೆಯನ್ನು ನಿರ್ಧರಿಸುವ ಕುರಿತು ಜಿಲ್ಲಾಧಿಕಾರಿಯವರು 3 ಜನರ ಸಮಿತಿಯೊಂದನ್ನು ರಚಿಸಿದ್ದು ಅದರಂತೆ ದಿ: 16-09-2023 ರಂದು ನಡೆದ ತಾರಾಲಯದ ವಾರ್ಷಿಕ ನಿರ್ವಹಣೆಯ 4ನೇ ಸಭೆಯಲ್ಲಿ Encore Maintenance Service ನ ಮೊತ್ತವನ್ನು ರೂ.59.65(Excluding GST) ಲಕ್ಷಕ್ಕಿಂತ ಕಡಿಮೆ ಮಾಡುವಂತೆ ವೆಂಡರ್ ರವರೊಂದಿಗೆ ಚರ್ಚಿಸಲಾಗಿತ್ತು. ಆಪ್ಟೋ ಮೆಕ್ಯಾನಿಕಲ್ ಘಟಕವನ್ನು AMC ಯಿಂದ ಹೊರತುಪಡಿಸಿದರೆ ರೂ.೦೯.೦೦ ಲಕ್ಷವನ್ನು ಕಡಿತಗೊಳಿಸುವುದಾಗಿ ತಿಳಿಸಿರುತ್ತಾರೆ, ಆಪ್ಟೋ ಮೆಕ್ಯಾನಿಕಲ್ ಘಟಕ ಸಮಸ್ಯೆಯ ಸಂಭವನೀಯತೆ ಕಡಿಮೆ ಹಾಗಾಗಿ ರೂ.೦೯.೦೦ ಲಕ್ಷವನ್ನು ಕಡಿತಗೊಳಿಸಿ ರೂ.50.65 ಲಕ್ಷ +GST 18% ಯನ್ನು ಒಪ್ಪಲಾಗಿತ್ತು. AMC ಯು 3 ವರ್ಷಗಳ ಅವಧಿಗೆ ಪರಿಗಣಿಸಿದರೆ ಅದೇ ದರಗಳು ಅನ್ವಯಿಸುತ್ತದೆ. ಇದು ವಾರ್ಷಿಕವಾಗಿದ್ದರೆ ಡಾಲರ್ ದರವನ್ನು ಅವಲಂಬಿಸಿ ಕಂಪನಿಯು ದರಗಳನ್ನು ಹೆಚ್ಚಿಸುವ ಸಾಧ್ಯತೆಯಿದೆ ಎಂದು ವೆಂಡರ್ ತಿಳಿಸಿರುತ್ತಾರೆ.

ತಾರಾಲಯದ ಉಪಕರಣಗಳು proprietory items ಆಗಿದ್ದು ವೆಂಡರ್ ಕಂಪನಿಯು ದೇಶದ ಏಕಮಾತ್ರ ಕಂಪನಿ ಆಗಿರುವುದರಿಂದ Karnataka Transperency in Public Procurement Act 1999 chapter 1 ರ ಭಾಗ iv ರ (ಬಿ ಮತ್ತು ಸಿ) ರಡಿ single source ನಲ್ಲಿ ಖರೀದಿಸಲು ಅವಕಾಶವಿರುತ್ತದೆ.

*4. b) "Where the goods or services are available from a single source or where a particular supplier or contractor has exclusive rights in respect of the goods or services or construction work and no reasonable alternatives or substitutes exist:*

*Provided that for the purpose of this clause there shall be a committee of three experts consisting of one technical representative of the procuring entity one technical representative of the Government organization dealing with similar procurement and one representative from a reputed Academic or*

*Research Institution or Non-Commercial Institution having expertise in such line to examine and declare that the goods or services are available from a single source;*

*c) Where the procuring entity having procured goods, services or technology from a supplier or contractor determines that additional supplies must be procured from the same supplier or contractor for reasons of standardization and compatibility with the existing goods, service or technology;* ಇದರಲ್ಲಿ ಸೂಚಿಸಿರುತ್ತಾರೆ.

ಹಾಗೂ ದಿನಾಂಕ:16-09-2023ರಂದು ನಡೆದ ತಾಂತ್ರಿಕ ಸಮಿತಿ ಸಭೆಯಲ್ಲಿ ಸಹ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿದೆ. ಆದುದರಿಂದ ಈ ಎಲ್ಲಾ ಹಿನ್ನೆಲೆಯಲ್ಲಿ AMC ಸಮಿತಿಯು ತೆಗೆದುಕೊಂಡ ತೀರ್ಮಾನದಂತೆ Encore Maintenance Service ನ Package A ಅನ್ನು Optomechanical system ಹೊರತುಪಡಿಸಿ ರೂ.50.65 ಲಕ್ಷ + ಜಿಎಸ್‌ಟಿ ಒಪ್ಪಿಗೆಯಾಗಿದೆ ಎಂಬ ವಿಷಯವನ್ನು ಗಮನಿಸುತ್ತಾ ಮತ್ತು ಟೆಂಡರ್ ನಿಬಂಧನೆ ಪ್ರಕಾರ ಕಾಮಗಾರಿ ಪೂರ್ಣಗೊಂಡ ನಂತರ ಟೆಂಡರ್‌ದಾರರ 5 ವರ್ಷಗಳ ನಿರ್ವಹಣಾ ಅವಧಿಯು ಮುಗಿದಿರುವುದರಿಂದ AMC ಗೆ ಸಂಬಂಧಿಸಿ ತೆಗೆದುಕೊಂಡ ನಿರ್ಣಯವನ್ನು ಸಭೆಯಲ್ಲಿ ಒಪ್ಪಲಾಯಿತು.

**ಕ್ರಮ: ನಿರ್ದೇಶಕರು, ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**ವಿಷಯ ಸಂಖ್ಯೆ 11 : ಪ್ರಾದೇಶಿಕ ವಿಜ್ಞಾನ ಕೇಂದ್ರದ ಸಿಬ್ಬಂದಿ ಶ್ರೀ ವಿರೂಪಾಕ್ಷಯ್ಯ ಇವರು ವೈದ್ಯಕೀಯ ವೆಚ್ಚವನ್ನು ಮರು ಪಾವತಿಸುವಂತೆ ಕೋರಿರುವ ಮನವಿಯ ಕುರಿತು.**

ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಖಾಯಂ ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವಿರೂಪಾಕ್ಷಯ್ಯ.ವಿ., ಟೆಕ್ನೀಶಿಯನ್ ಇವರಿಗೆ ದಿ:28–06–2022 ರಂದು ಗಂಡು ಮಗು ಜನಿಸಿದ್ದು ಮಗುವಿನ ಹೃದಯದಲ್ಲಿ ಎರಡು ರೀತಿಯ ತೊಂದರೆ ಇದ್ದುದರಿಂದ ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗಿದೆ. ಸದ್ರಿ ಶಸ್ತ್ರ ಚಿಕಿತ್ಸೆಗೆ ಒಟ್ಟು ವೆಚ್ಚ ರೂ.10,67,778/– ಅದರಲ್ಲಿ ರೂ.5,56,128/– ವಿನಾಯತಿ ಹಾಗೂ ರೂ.1,70,000/– ಪ್ರಾಯೋಜಿತ ಮೊತ್ತ ಹೊರತುಪಡಿಸಿ, ಬಾಕಿ ಮೊತ್ತ ರೂ.3,41,650/–ವನ್ನು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಿಂದ ಒದಗಿಸುವಂತೆ ಸದ್ರಿಯವರು ಹಲವಾರು ಬಾರಿ ಮನವಿ ಮಾಡಿರುತ್ತಾರೆ.

ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಲಾಗಿದ್ದು ಶ್ರೀ ವಿರೂಪಾಕ್ಷಯ್ಯ ವಿ, ಇವರ ಮಗನ ಹೃದಯ ಶಸ್ತ್ರ ಚಿಕಿತ್ಸೆಯ ವೈದ್ಯಕೀಯ ವೆಚ್ಚವನ್ನು ಪ್ರಾಧಿಕಾರದ ಸ್ವಂತ ಆದಾಯದಲ್ಲಿ ಭರಿಸುವ ಬಗ್ಗೆ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅನುಮೋದನೆ ಪಡೆದು, ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಹಾಗೂ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಸರ್ಕಾರದಿಂದ ಮಂಜೂರಾದ ಖಾಯಂ ಸಿಬ್ಬಂದಿ ಮತ್ತು ಅವರ ಅವಲಂಬಿತರಿಗೆ ವೈದ್ಯಕೀಯ ವೆಚ್ಚವನ್ನು ಪ್ರಾಧಿಕಾರದ ಸ್ವಂತ ಆದಾಯದಲ್ಲಿ ಭರಿಸಲು ಸೂಕ್ತ ನಿರ್ಣಯಗಳನ್ನು ರಚಿಸಲು ಅಗತ್ಯ ಕ್ರಮ ವಹಿಸಬೇಕೆಂದು ದಿ:26–09–2022ರ ಪತ್ರದ ಮೂಲಕ ತಿಳಿಸಿರುತ್ತಾರೆ.

ಈ ಕುರಿತು ಚರ್ಚೆ ಮತ್ತು ನಿರ್ಧಾರಕ್ಕಾಗಿ.

**ನಿರ್ಣಯ:** ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಖಾಯಂ ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವಿರೂಪಾಕ್ಷಯ್ಯ.ವಿ., ಟೆಕ್ನೀಶಿಯನ್ ಇವರ ಗಂಡು ಮಗುವಿನ ಹೃದಯ ಶಸ್ತ್ರ ಚಿಕಿತ್ಸೆಗೆ ತಗುಲಿದ ಒಟ್ಟು ವೆಚ್ಚ ರೂ.10,67,778/– ಅದರಲ್ಲಿ ರೂ.5,56,128/– ವಿನಾಯತಿ ಹಾಗೂ ರೂ.1,70,000/– ಪ್ರಾಯೋಜಿತ ಮೊತ್ತ ಹೊರತುಪಡಿಸಿ, ಬಾಕಿ ಮೊತ್ತ ರೂ.3,41,650/–ವನ್ನು ಪಾವತಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಸದ್ರಿಯವರ ವೇತನ ಶ್ರೇಣಿಗೆ ಸರ್ಕಾರದಲ್ಲಿ ನೀಡಬಹುದಾದ ವೈದ್ಯಕೀಯ ವೆಚ್ಚವನ್ನು ಪರಿಗಣಿಸಿ ಅವರಿಗೆ ಅನ್ವಯಿಸಬಹುದಾದ ಪರಿಹಾರ ಮೊತ್ತವನ್ನು ಪ್ರಾಧಿಕಾರದ ಲೆಕ್ಕಪತ್ರ ಅಧಿಕಾರಿಯವರು ಪರಿಶೀಲಿಸಿಕೊಂಡು ಪಾವತಿಸಲು ನಿರ್ಧರಿಸಲಾಯಿತು. ಮುಂದಿನ ದಿನಗಳಲ್ಲಿ ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಮಗಳನ್ನು

ರಚಿಸಿದಾಗ ನೀಡಿದ ಮೊತ್ತವು ಹೆಚ್ಚುವರಿಯಾಗಿದೆ ಎಂದು ಕಂಡುಬಂದಲ್ಲಿ ಪ್ರಾಧಿಕಾರಕ್ಕೆ ಹಿಂತಿರುಗಿಸಬೇಕಾಗುತ್ತದೆ ಎಂಬ ಷರತ್ತಿನನ್ವಯ ಪಾವತಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

**ಕ್ರಮ: ಲೆಕ್ಕಪತ್ರ ಅಧಿಕಾರಿ ಮತ್ತು ಆಡಳಿತ ವಿಭಾಗ, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**ವಿಷಯ ಸಂಖ್ಯೆ 12 : ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ವೈದ್ಯಕೀಯ (ಮೆಡಿಕ್ಲೈಮ್) ಸೌಲಭ್ಯವನ್ನು ಒದಗಿಸುವ ಕುರಿತು.**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ವಿವಿಧ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಪ್ರಾಧಿಕಾರದ ವತಿಯಿಂದ ಯಾವುದೇ ವೈದ್ಯಕೀಯ (ಮೆಡಿಕ್ಲೈಮ್) ಸೌಲಭ್ಯ ನೀಡಿರುವುದಿಲ್ಲ. ಪ್ರಾಧಿಕಾರದಲ್ಲಿ ಮಾಸಿಕ ರೂ. 21,000/–ಕ್ಕಿಂತ ಕಡಿಮೆ ವೇತನ ಪಡೆಯುವ ಸಿಬ್ಬಂದಿಗಳಿಗೆ ಇ.ಎಸ್.ಐ. ಸೌಲಭ್ಯವನ್ನು ನೀಡುತ್ತಿದ್ದು ಅವರಿಗೆ ಮತ್ತು ಅವರ ಅವಲಂಬಿತರಿಗೆ ಇ.ಎಸ್.ಐ. ಮುಖಾಂತರ ವೈದ್ಯಕೀಯ ಸೌಲಭ್ಯವಿರುತ್ತದೆ.

ಆದ್ದರಿಂದ ಇ.ಎಸ್.ಐ. ಸೌಲಭ್ಯ ಇಲ್ಲದ ಹಾಲಿ 30 ಜನ ಖಾಯಂ ಸಿಬ್ಬಂದಿಗಳಿಗೆ ಮತ್ತು ಅವರ ಅವಲಂಬಿತರಿಗೆ ಗುಂಪು ವೈದ್ಯಕಿಯ (Group Mediclaim) ಸೌಲಭ್ಯವನ್ನು ಪ್ರಾಧಿಕಾರದ ವತಿಯಿಂದ ಒದಗಿಸಲು ಕ್ರಮ ಕೈಗೊಳ್ಳಬೇಕಾಗಿದೆ.

ಈ ಕುರಿತು ವಿವಿಧ ಇನ್ಸೂರೆನ್ಸ್ ಕಂಪೆನಿಗಳು ದರಪಟ್ಟಿಯನ್ನು ನೀಡಿದ್ದು, ಈ ಪೈಕಿ ಮೆ. ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪೆನಿಯು ನೀಡಿದ್ದ ದರಪಟ್ಟಿಯು ಎಲ್ಲಕ್ಕಿಂತ ಕಡಿಮೆಯಾಗಿದ್ದು ವಾರ್ಷಿಕ ಅಂದಾಜು ಮೊತ್ತ ರೂ. 3.8 ಲಕ್ಷ ಆಗಬಹುದೆಂದು ತಿಳಿಸಿರುತ್ತಾರೆ. ಈ ಕುರಿತು ಮುಂದಿನ ನಿರ್ಧಾರಕ್ಕಾಗಿ ಮಂಡಿಸಿದೆ.

**ನಿರ್ಣಯ:** ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುವ 30 ಖಾಯಂ ಸಿಬ್ಬಂದಿಗಳಿಗೆ ಮತ್ತು ಅವರ ಅವಲಂಭಿತರಿಗೆ ವಾರ್ಷಿಕ ರೂ. 3.00 ಲಕ್ಷ ಮೊತ್ತದ ವೈದ್ಯಕೀಯ (Group Mediclaim) ಸೌಲಭ್ಯ ನೀಡಲು ಕೋರಿರುವುದನ್ನು ಚರ್ಚಿಸಿದಾಗ ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್, ಬೆಂಗಳೂರು ಇವರು ವಾರ್ಷಿಕ ರೂ. 5.00 ಲಕ್ಷ ಮೊತ್ತದ ವೈದ್ಯಕೀಯ (Group Family Mediclaim) ಸೌಲಭ್ಯವನ್ನು ನೀಡುವುದು ಸೂಕ್ತವೆಂದು ಅಭಿಪ್ರಾಯ ನೀಡಿದರು.

ಈ ಸೌಲಭ್ಯದ ಕುರಿತು ಸಿಬ್ಬಂದಿಗಳ ಮಾಸಿಕ ವೇತನ ಜಮೆ ಆಗುವ ಬ್ಯಾಂಕ್‌ನೊಂದಿಗೆ ಅಥವಾ ಸ್ಥಳೀಯ ರಾಷ್ಟ್ರೀಕೃತ ಬ್ಯಾಂಕ್‌ನೊಂದಿಗೆ ಚರ್ಚಿಸಿಕೊಂಡು ಅತ್ಯುತ್ತಮ ಸೇವೆಯನ್ನು ನೀಡುವ ಗುಂಪು ವೈದ್ಯಕೀಯ ಸೌಲಭ್ಯದ ಬಗ್ಗೆ ಪರಿಶೀಲಿಸಿ ಶೀಘ್ರ ಕ್ರಮ ತೆಗೆದುಕೊಳ್ಳಲು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

**ಕ್ರಮ: ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**ವಿಷಯ ಸಂಖ್ಯೆ 13 : ಸ್ವಾಮಿ ವಿವೇಕಾನಂದ ತಾರಾಲಯಕ್ಕೆ 30 ಲ್ಯಾಂಪ್‌ಗಳನ್ನು ರೂ.21.24 ಲಕ್ಷಗಳ ವೆಚ್ಚದಲ್ಲಿ ಖರೀದಿಸಲಾಗಿದ್ದು ಘಟನೋತ್ತರ ಮಂಜೂರಾತಿ ನೀಡುವ ಕುರಿತು.**

ಟೆಂಡರ್ ಶರ್ತಗಳಂತೆ ಪ್ರೊಜೆಕ್ಟರ್ ಸಿಸ್ಟಂಗಳ ವೆಂಡರ್ ಮೆ।ಇವಾನ್ಸ್ ಆಂಡ್ ಸದರ್‌ಲ್ಯಾಂಡ್ ಕಂಪ್ಯೂಟರ್ ಕಾರ್ಪೋರೇಷನ್, ಯುಎಸ್ಎ ಇವರು ತಮ್ಮ ಕಂಪನಿ ಸ್ವಾಮ್ಯದ ಡಿಜಿಟಲ್ ಹಾಗೂ ಆಪ್ಟೋಮೆಕ್ಯಾನಿಕಲ್ ಪ್ರೊಜೆಕ್ಟರ್ ಸಿಸ್ಟಮ್‌ಗಳನ್ನು, ಅದಕ್ಕೆ ಸಂಬಂಧಿಸಿದ ಸಾಫ್ಟ್‌ವೇರ್‌ಗಳನ್ನು ಹಾಗೂ ಇನ್ನಿತರ ಉಪಕರಣಗಳನ್ನು ತಾರಾಲಯದಲ್ಲಿ ಅಳವಡಿಸಿದ್ದು ಈ ಉಪಕರಣಗಳು ಕಂಪನಿಯ ಏಕಸ್ವಾಮ್ಯತೆಗೆ (proprietary items) ಒಳಪಟ್ಟಿದೆ.

ತಾರಾಲಯದ ಉಪಕರಣಗಳು proprietary items ಆಗಿರುವುದರಿಂದ KTPP Act 1999 chapter 1 ರ ಭಾಗ 4 ರ (ಸಿ) ರಡಿ single source ನಲ್ಲಿ ಖರೀದಿಸಲು ಅವಕಾಶವಿರುತ್ತದೆ.

***c) Where the procuring entity having procured goods, services or technology from a supplier or contractor determines that additional supplies must be procured from the same supplier or contractor for resons of standardization and compatibility with the existing goods, service or technology;***

ತಾರಾಲಯದ ಲ್ಯಾಂಪ್‌ಗಳ lifetime ಮುಗಿಯುತ್ತಾ ಬಂದಿರುವುದಿಂದ ಕೂಡಲೇ ವೆಂಡರ್ ಕಂಪನಿಯಿಂದ 30 ಲ್ಯಾಂಪ್‌ಗಳನ್ನು ಖರೀದಿಸುವಂತೆ ನಿರ್ದೇಶಕರು, ಪ್ರಾ.ವಿ.ಕೇಂದ್ರ ಇವರು ಮನವಿ ಮಾಡಿರುತ್ತಾರೆ. ಅದರಂತೆ ದಿ:18–07–2023ರಂದು ನಡೆದ ತಾರಾಲಯದ ವಾರ್ಷಿಕ ನಿರ್ವಹಣೆಯ ಸಭೆಯಲ್ಲಿ ಕೂಡಾ 30 ಲ್ಯಾಂಪ್‌ಗಳನ್ನು ಖರೀದಿಸುವ ಕುರಿತು ತೀರ್ಮಾನವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ತಾರಾಲಯಕ್ಕೆ 30 ಲ್ಯಾಂಪ್‌ಗಳನ್ನು ವೆಂಡರ್ ಕಂಪನೆಯಿಂದ ರೂ.21.24 ಲಕ್ಷಗಳ ವೆಚ್ಚದಲ್ಲಿ ದಿನಾಂಕ 6–9–2023 ರ ಕಛೇರಿ ಆದೇಶದಂತೆ ಖರೀದಿಸಲಾಗಿರುತ್ತದೆ.

ಈ ಕುರಿತು ಘಟನೋತ್ತರ ಮಂಜೂರಾತಿಗಾಗಿ ಮಂಡಿಸಿದೆ.

**ನಿರ್ಣಯ:** ಸ್ವಾಮಿ ವಿವೇಕಾನಂದ ತಾರಾಲಯದ ಲ್ಯಾಂಪ್‌ಗಳ ಅವಧಿಯು ಮುಗಿಯುತ್ತಾ ಬಂದಿರುವುದರಿಂದ ಹಾಗೂ ತಾರಾಲಯದ ಉಪಕರಣಗಳು proprietary items ಆಗಿರುವುದರಿಂದ KTPP Act 1999 chapter 1 ರ ಭಾಗ 4 ರ (ಸಿ) ರಡಿ single source ನಲ್ಲಿ ಖರೀದಿಸಲು ಅವಕಾಶವಿರುತ್ತದೆ.

***4.c) Where the procuring entity having procured goods, services or technology from a supplier or contractor determines that additional supplies m ust be procured from the same supplier or contractor for resons of standardization and compatibility with the existing goods, service or technology;***

ಈ ಹಿನ್ನೆಲೆಯಲ್ಲಿ ಈಗಾಗಲೇ ತಾರಾಲಯದ ವೆಂಡರ್ ಮೆ।ಇವಾನ್ಸ್ ಆಂಡ್ ಸದರ್‌ಲ್ಯಾಂಡ್ ಕಂಪ್ಯೂಟರ್ ಕಾರ್ಪೋರೇಷನ್, ಯುಎಸ್‌ಎ ಇವರ ಭಾರತದ ಪ್ರತಿನಿಧಿಯಾದ ಮೆ। ಇನ್ಫೋವಿಷನ್ ಟೆಕ್ನೋಲಾಜೀಸ್ ಪ್ರೈ.ಲಿ., ಮುಂಬಯಿ ಇವರ ಮೂಲಕ ಅಮೇರಿಕದಿಂದ ಖರೀದಿಸಿರುವ 30 ಲ್ಯಾಂಪ್‌ಗಳ ಒಟ್ಟು ವೆಚ್ಚ ರೂ.21.24 ಲಕ್ಷಕ್ಕೆ ಸಭೆಯಲ್ಲಿ ಘಟನೋತ್ತರ ಮಂಜೂರಾತಿ ನೀಡಲಾಯಿತು.

**ವಿಷಯ ಸಂಖ್ಯೆ 14 : ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನದ ಹೆಚ್ಚಳದ ಮನವಿಯ ಕುರಿತು**

ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಸ್ವಾಮಿ ವಿವೇಕಾನಂದ ತಾರಾಲಯದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ವೇತನ ಹೆಚ್ಚಳದೊಂದಿಗೆ ಪಿಎಫ್/ಇಎಸ್‌ಐ/ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವಂತೆ ಮನವಿ ಮಾಡಿರುತ್ತಾರೆ. ಸದ್ರಿ ಸಿಬ್ಬಂದಿಗಳು 2018 ರ ಜನವರಿ/ಫೆಬ್ರವರಿ ತಿಂಗಳಲ್ಲಿ ಗುತ್ತಿಗೆ ನೆಲೆಯಲ್ಲಿ ನೇಮಕಗೊಂಡು ಈ ಕೆಳಕಾಣಿಸಿದಂತೆ ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿದ್ದಾರೆ.

1) ಶ್ರೀ ವಿಘ್ನೇಶ್ ಭಟ್, ವೈಜ್ಞಾನಿಕಾಧಿಕಾರಿ – ಮಾಸಿಕ ರೂ. 40,000/–
2) ಶ್ರೀ ಶಿವರಾಮ್ ನಾಯ್ಕ್, ಕಮ್ಯೂನಿಟಿ ಮೊಬಿಲೈಸರ್ – ಮಾಸಿಕ ರೂ. 31,500/–
3) ಶ್ರೀಮತಿ ವಂದನಾ ಪ್ರಮೋದ್ ಕುಮಾರ್, ಟೆಕ್ನೀಶಿಯನ್– ಮಾಸಿಕ ರೂ. 19,000/–
4) ಶ್ರೀ ಶರತ್ ಕುಮಾರ್, ಟೆಕ್ನೀಶಿಯನ್ – ಮಾಸಿಕ ರೂ. 19,000/–

ಮಾನ್ಯ ಜಿಲ್ಲಾಧಿಕಾರಿಯವರು ಹಾಗೂ ಅಧ್ಯಕ್ಷರು ಇವರ ನಿರ್ದೇಶನಗಳನ್ನು ಅನುಸರಿಸಿ ತಾರಾಲಯಕ್ಕೆ ಹಾಗೂ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಅವಶ್ಯವಿರುವ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯುವ ಕುರಿತು ಕಛೇರಿಯಿಂದ ಇ–ಟೆಂಡರ್ ನ್ನು ಕರೆಯಲಾಗಿದ್ದು, ಮೇಲಿನ ಮನವಿದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್

ಪಿಟಿಶನ್ ಸಂಖ್ಯೆ 8304/2022 ರ ಅರ್ಜಿಯನ್ನು ದಾಖಲಿಸಿ ಇ–ಟೆಂಡರ್‌ಗೆ ದಿ:19–04–2022 ರಂದು ತಡೆಯಾಜ್ಞೆಯನ್ನು ತಂದಿರುತ್ತಾರೆ. ಈ ಪ್ರಕರಣವು ತನಿಖಾ ಹಂತದಲ್ಲಿರುವುದರಿಂದ ಸದ್ರಿಯವರಿಗೆ ವೇತನ ಹೆಚ್ಚಳದೊಂದಿಗೆ ಪಿಎಫ್/ಇಎಸ್‌ಐ/ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ವಿಚಾರದಲ್ಲಿ ಸರ್ಕಾರದ ಆದೇಶ ಕೋರಿ ಪತ್ರ ಬರೆಯಲಾಗಿದೆ. ಮೇಲಿನ ಗುತ್ತಿಗೆ ಸಿಬ್ಬಂದಿಗಳು ಕೂಡಾ ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದಿರುತ್ತಾರೆ. ಈ ಕುರಿತು ನಿಯಮಾನುಸಾರ ಪರಿಶೀಲಿಸಿ, ವರದಿಯನ್ನು ಕೆಸ್ಟೆಪ್ಸ್ ಸಂಸ್ಥೆಗೆ ಸಲ್ಲಿಸುವಂತೆ ದಿ:02–01–2024ರ ಪತ್ರದ ಮೂಲಕ ಕೆಸ್ಟೆಪ್ಸ್ ಸಂಸ್ಥೆಯು ಪ್ರಾಧಿಕಾರಕ್ಕೆ ತಿಳಿಸಿರುತ್ತಾರೆ.

ಆದ್ದರಿಂದ ಮೇಲಿನ ಸಿಬ್ಬಂದಿಗಳ ಮನವಿಯ ಕುರಿತು ಚರ್ಚೆ ಮತ್ತು ನಿರ್ಧಾರ.

**ನಿರ್ಣಯ:** ಸ್ವಾಮಿ ವಿವೇಕಾನಂದ ತಾರಾಲಯದ ಉದ್ಘಾಟನೆಯ ಸಂದರ್ಭದಲ್ಲಿ ಕೆಸ್ಟೆಪ್ಸ್ ಸಂಸ್ಥೆಯು 3 ವರ್ಷದ ಅವಧಿಗೆ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡುವಂತೆ ಸೂಚಿಸಲಾಗಿರುತ್ತದೆ. ಅದರಂತೆ ನೇಮಕಾತಿ ಮಾಡಿ 3 ವರ್ಷದ ಗುತ್ತಿಗೆ ಅವಧಿಯು ಮುಗಿದಿರುವುದರಿಂದ ತಾರಾಲಯದಲ್ಲಿನ ತಾತ್ಕಾಲಿಕ ಹುದ್ದೆಗಳನ್ನು ಮುಂದಿನ ಅವಧಿಗೆ ಭರ್ತಿ ಮಾಡುವ ವಿಚಾರದಲ್ಲಿ ಕೆಸ್ಟೆಪ್ಸ್ ಸಂಸ್ಥೆಯನ್ನು ಕೋರಲಾಗಿದ್ದು ಅಗತ್ಯತೆಯ ಆಧಾರದ ಮೇಲೆ ತಾರಾಲಯ ನಿರ್ವಹಣೆಗೆ ಬಿಡುಗಡೆಯಾಗುವ ಅನುದಾನದ ಅನುಸಾರವಾಗಿ ನಿಯಮಾನುಸಾರ ಪ್ರಾಧಿಕಾರದ ಹಂತದಲ್ಲೇ ಸೂಕ್ತ ಕ್ರಮ ಕೈಗೊಳ್ಳಬಹುದೆಂದು ಕೆಸ್ಟೆಪ್ಸ್ ಸಂಸ್ಥೆಯು ದಿ:11–12–2020ರ ಪತ್ರದಲ್ಲಿ ತಿಳಿಸಿರುತ್ತದೆ. ಈ ಸಂಬಂಧ ತಾರಾಲಯಕ್ಕೆ ಸರ್ಕಾರದಿಂದ ಯಾವುದೇ ಹುದ್ದೆಗಳು ಮಂಜೂರಾಗದ ಹಿನ್ನೆಲೆಯಲ್ಲಿ ಅರ್ಹ ಸಿಬ್ಬಂದಿಗಳನ್ನು ಅಗತ್ಯತೆಗೆ ಅನುಸಾರವಾಗಿ ಹೊರಗುತ್ತಿಗೆ ಏಜೆನ್ಸಿ ಮೂಲಕ ತೆಗೆದುಕೊಳ್ಳಲು ಮಾನ್ಯ ಜಿಲ್ಲಾಧಿಕಾರಿಯವರು ಸೂಚಿಸಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಸ್ವಾಮಿ ವಿವೇಕಾನಂದ ತಾರಾಲಯದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಾದ ಶ್ರೀ ವಿಘ್ನೇಶ್ ಭಟ್, ವೈಜ್ಞಾನಿಕಾದಿಕಾರಿ, ಶ್ರೀ ಶಿವರಾಮ್ ನಾಯ್ಕ್, ಕಮ್ಯೂನಿಟಿ ಮೊಬಿಲೈಸರ್, ಶ್ರೀ ಶರಣಯ್ಯ, ಶೈಕ್ಷಣಿಕ ಸಹಾಯಕ, ಶ್ರೀಮತಿ ವಂದನಾಪ್ರಮೋದ್ ಕುಮಾರ್ ಮತ್ತು ಶ್ರೀ ಶರತ್ ಕುಮಾರ್ ಟೆಕ್ನೀಶಿಯನ್ ಇವರುಗಳು ತಾರಾಲಯಕ್ಕೆ ಹಾಗೂ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಅವಶ್ಯವಿರುವ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯುವ ಕುರಿತು ಈ ಕಛೇರಿಯಿಂದ ಕರೆಯಲಾದ ಇ–ಟೆಂಡರ್ ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮಧ್ಯಂತರ ತಡೆಯಾಜ್ಞೆಯನ್ನು ತಂದಿರುವುದರಿಂದ ಸದರಿಯವರ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗುವವರೆಗೆ ವೇತನ ಹೆಚ್ಚಳದೊಂದಿಗೆ ಪಿಎಫ್/ಇಎಸ್‌ಐ/ವೈದ್ಯಕೀಯ ಇತರೆ ಯಾವುದೇ ಸೌಲಭ್ಯಗಳನ್ನು ನೀಡಲು ಅವಕಾಶವಿರುವುದಿಲ್ಲ ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಮೇಲಿನ ಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ನಿಯಮಾನುಸಾರ ಗುತ್ತಿಗೆ ಆಧಾರದ ಮೂಲಕ ಹೊಸದಾಗಿ ನೇಮಕಾತಿ ಮಾಡುವ ಕುರಿತು ಪ್ರಾಧಿಕಾರದ ಕಾಯ್ದೆಯಲ್ಲಿ ಅವಕಾಶವಿದೆಯೇ ಎಂದು ಪರಿಶೀಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್ ಇವರು ಸೂಚಿಸಿದಂತೆ ಸೂಕ್ತ ಕ್ರಮ ತೆಗೆದುಕೊಳ್ಳಲು ನಿರ್ಧರಿಸಲಾಯಿತು.

**ಕ್ರಮ: ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**ವಿಷಯ ಸಂಖ್ಯೆ 15. :ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಜೈವಿಕ ಉದ್ಯಾನದಲ್ಲಿ ಸಂಚಿತ ವೇತನದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಮುಂದುವರಿಸುವ ವಿಚಾರದ ಕುರಿತು.**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಜೈವಿಕ ಉದ್ಯಾನವನದಲ್ಲಿ ಸಂಚಿತ ವೇತನದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವಾ ಅವಧಿಯನ್ನು ಮುಂದುವರಿಸುವ ವಿಚಾರವನ್ನು ದಿ:5.9.2022 ರಂದು ಜರುಗಿದ

ಪ್ರಾಧಿಕಾರದ ಪ್ರಥಮ ಸಭೆಯಲ್ಲಿ ಚರ್ಚಿಸಲಾಗಿ ಸೇವಾವಧಿ ಮುಕ್ತಾಯಗೊಂಡ ಎಲ್ಲಾ ಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯುವುದೆಂದು ನಿರ್ಣಯ ಸಂಖ್ಯೆ 19 ರಂತೆ ತೀರ್ಮಾನಿಸಲಾಗಿರುತ್ತದೆ.

ಆದರೆ, ಸದ್ರಿ ಸಿಬ್ಬಂದಿಗಳು ಜವಾಬ್ದಾರಿಯುತ ಕೆಲಸ ನಿರ್ವಹಿಸುತ್ತಿರುವುದರಿಂದ ನಿರ್ದೇಶಕರು, ಜೈವಿಕ ಉದ್ಯಾನವನ ಇವರು ವೃಂದ ಮತ್ತು ನೇಮಕಾತಿ ಆಗುವವರೆಗೆ ಸದ್ರಿಯವರ ಸೇವೆಯನ್ನು ನೇರ ಗುತ್ತಿಗೆಯಡಿ ಮುಂದುವರಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟಂತೆ ಈವರೆಗೆ ಗುತ್ತಿಗೆ ನೆಲೆಯಲ್ಲಿ ಮುಂದುವರಿಸಿಕೊಂಡು ಬರಲಾಗಿದೆ.

ಆದ್ದರಿಂದ, ಗುತ್ತಿಗೆ ಸೇವಾವಧಿ ಮುಕ್ತಾಯಗೊಂಡ ಸಿಬ್ಬಂದಿಗಳ ಸೇವೆಯನ್ನು ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಮಗಳು ಆಗುವವರೆಗೆ ನೇರ ಗುತ್ತಿಗೆಯಡಿ ಮುಂದುವರಿಸುವ ವಿಚಾರದ ಕುರಿತು ಚರ್ಚೆ ಮತ್ತು ನಿರ್ಧಾರ.

**ನಿರ್ಣಯ:** ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಜೈವಿಕ ಉದ್ಯಾನವನದಲ್ಲಿ ಸಂಚಿತ ವೇತನದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ದಿನಾಂಕ 5–9–2022 ರಂದು ಜರಗಿದ ಪ್ರಾಧಿಕಾರದ ಪ್ರಥಮ ಸಭೆಯಲ್ಲಿ ನಿರ್ಧರಿಸಿದಂತೆ ಪ್ರಾಧಿಕಾರದಲ್ಲಿ ಸಂಚಿತ ವೇತನದಲ್ಲಿ ಕರ್ತವ್ಯ ನಿರ್ವಹಿಸುವ ಗುತ್ತಿಗೆ ಸಿಬ್ಬಂದಿಗಳನ್ನು ಹೊರಗುತ್ತಿಗೆ ಮೂಲಕ ಪಡೆಯಲು ನಿರ್ಧರಿಸಿದಂತೆ ತಕ್ಷಣದಿಂದ ಈ ಕುರಿತು ಕ್ರಮ ತೆಗೆದುಕೊಳ್ಳಲು ನಿರ್ಧರಿಸಲಾಯಿತು.

**ಕ್ರಮ: ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**ವಿಷಯ ಸಂಖ್ಯೆ 16: ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಜೈವಿಕ ಉದ್ಯಾನವನದಲ್ಲಿ ಸಂಚಿತ ವೇತನದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನವನ್ನು ಹೆಚ್ಚಿಸುವ ವಿಚಾರದ ಕುರಿತು.**

ಪಿಲಿಕುಳ ಜೈವಿಕ ಉದ್ಯಾನವನದಲ್ಲಿ ಗುತ್ತಿಗೆ ನೆಲೆಯಲ್ಲಿ ಸಂಚಿತ ವೇತನದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಾಣಿಸಿದ ಸಿಬ್ಬಂದಿಗಳು ಅವರು ಕಳೆದ 5 ವರ್ಷಗಳಿಂದ ಜೈವಿಕ ಉದ್ಯಾನವನದಲ್ಲಿ ಸೇವೆ ಸಲ್ಲಿಸುತ್ತಿದ್ದು ಅವರಿಗೆ ಪಿಎಫ್ ಮತ್ತು ಮುಂಬಡ್ತಿ ಸವಲತ್ತು ಸಿಗದೆ ಕನಿಷ್ಟ ವೇತನದಲ್ಲಿರುವುದರಿಂದ ಸಂಸಾರ ನಡೆಸುವುದು ಕಷ್ಟಕರವಾಗಿದೆ ಎಂದು ತಿಳಿಸಿ ಇ.ಪಿ.ಎಫ್. ಸೌಲಭ್ಯ, ರಿಸ್ಕ್ ಅಲೊಯೆನ್ಸ್ ನೀಡಲು ಕೋರಿ ಮನವಿ ಸಲ್ಲಿಸಿರುತ್ತಾರೆ.

| | ಕರ್ತವ್ಯಕ್ಕೆ ಸೇರಿದ ದಿನಾಂಕ | ಸಂಚಿತ ವೇತನ |
|---|---|---|
| 1) ಶ್ರೀ ಜಯಗೌಡ, ಪ್ರಾಣಿಪರಿಪಾಲಕರು | 6.8.2019 | ರೂ.13,500.00 |
| 2) ಶ್ರೀ ಹರೀಶ್ ಪಿ., ವೆಟರಿನರಿ ಸಹಾಯಕರು | 6.8.2019 | ರೂ.15,000.00 |
| 3) ಶ್ರೀ ವಿನೀತ್ ಕುಮಾರ್, ಪ್ರಾಣಿಪರಿಪಾಲಕರು | 20.9.2021 | ರೂ. 13,250.00 |
| 4) ಶ್ರೀ ಹರೀಶ ಭೈರ, ಪ್ರಾಣಿಪರಿಪಾಲಕರು | 20.9.2021 | ರೂ. 13,250.00 |

ಮೇಲಿನ ಸಿಬ್ಬಂದಿಗಳ ಸಂಚಿತ ವೇತನವು ಪ್ರಸ್ತುತ ಸರ್ಕಾರವು ನಿಗದಿಪಡಿಸಿರುವ ಕನಿಷ್ಟ ವೇತನಕ್ಕಿಂತಲೂ ಕಡಿಮೆ ಇರುವುದನ್ನು ಗಮನಿಸಿಕೊಂಡು ಅವರಿಗೆ ಇ.ಪಿ.ಎಫ್. ಸೌಲಭ್ಯ, ಮೆಡಿಕ್ಲೈಮ್ ಮತ್ತು ರಿಸ್ಕ್ ಅಲೋಯನ್ಸ್ ಮಾಸಿಕ ರೂ.700/– ನ್ನು ಮಂಜೂರು ಮಾಡುವ ಕುರಿತು ಸಭೆಯ ನಿರ್ಧಾರಕ್ಕೆ ಒಪ್ಪಿಸಿದೆ.

**ನಿರ್ಣಯ:** ಪಿಲಿಕುಳ ಜೈವಿಕ ಉದ್ಯಾನವನದಲ್ಲಿ ಗುತ್ತಿಗೆ ನೆಲೆಯಲ್ಲಿ ಸಂಚಿತ ವೇತನದಲ್ಲಿ ತಾತ್ಕಾಲಿಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ವಿಷಯ ಸಂಖ್ಯೆ 15 ರ ನಿರ್ಣಯದಲ್ಲಿ ತಿಳಿಸಿದಂತೆ ಹೊರಗುತ್ತಿಗೆ ಮೂಲಕ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.

**ಕ್ರಮ: ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**<u>ವಿಷಯ ಸಂಖ್ಯೆ 17 : ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಗಳಿಕೆ ರಜೆ ಮತ್ತು ಬದಲಿ ರಜೆಯ ಸೌಲಭ್ಯ ನೀಡುವ ಕುರಿತು.</u>**

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ವಾರದ ರಜೆ ಹೊರತು ಪಡಿಸಿ ಇತರೆ ಯಾವುದೇ ಸರಕಾರಿ ರಜೆಗಳು ಹಾಗೂ ಗಳಿಕೆ ರಜೆಯ ಸೌಲಭ್ಯವು ಇರುವುದಿಲ್ಲ.

ಪ್ರಾದೇಶಿಕ ವಿಜ್ಞಾನ ಕೇಂದ್ರದ ಸಿಬ್ಬಂದಿಗಳಿಗೆ ಸರಕಾರಿ ರಜೆಗೆ ಬದಲಿ ರಜೆ ಮತ್ತು ಗಳಿಕೆ ರಜೆಯ ಸೌಲಭ್ಯವನ್ನು ನೀಡುವಂತೆ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುವ ಇತರೆ ಸಿಬ್ಬಂದಿಗಳಿಗೂ ನೀಡುವಂತೆ ಮನವಿಯಲ್ಲಿ ಕೋರಿರುತ್ತಾರೆ.

ಆದ್ದರಿಂದ ಈ ವಿಚಾರದ ಕುರಿತು ಚರ್ಚೆ ಮತ್ತು ನಿರ್ಧಾರಕ್ಕಾಗಿ ಮಂಡಿಸಿದೆ.

**<u>ನಿರ್ಣಯ:</u>** ಗಳಿಕೆ ರಜೆ ಸೌಲಭ್ಯ ಮತ್ತು ಸರಕಾರಿ ರಜೆಯಂದು ಕರ್ತವ್ಯ ನಿರ್ವಹಿಸಿದ ಬಾಬ್ತು ಬದಲಿ ರಜೆಯ ಸೌಲಭ್ಯಗಳನ್ನು ಪಡೆಯಲು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಾಮಾವಳಿಗಳನ್ನು ರಚಿಸುವಾಗ ಈ ಕುರಿತು ಸೂಕ್ತ ಕ್ರಮತೆಗೆದುಕೊಳ್ಳಲು ತೀರ್ಮಾನಿಸಲಾಯಿತು.

**ಕ್ರಮ: ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**<u>ವಿಷಯ ಸಂಖ್ಯೆ 18 : ಪ್ರಾಧಿಕಾರದ 2021–22 ಮತ್ತು 2022–23 ನೇ ಸಾಲಿನ ವಾರ್ಷಿಕ ಆಡಳಿತ ವರದಿಯ ಕರಡು ಅನುಮೋದನೆ ಕುರಿತು.</u>**

**<u>ನಿರ್ಣಯ:</u>** ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ 2021–22 ಮತ್ತು 2022–23 ನೇ ಸಾಲಿನ ವಾರ್ಷಿಕ ಆಡಳಿತ ವರದಿಯ ಕರಡನ್ನು ಪರಿಶೀಲಿಸಿ ಅನುಮೋದಿಸಲಾಯಿತು.

## <u>ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು :</u>

**<u>ವಿಷಯ ಸಂಖ್ಯೆ 19 : ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಒಟ್ಟು ಜಾಗದ ವಿಸ್ತೀರ್ಣದ ಪೂರ್ಣ ಸರ್ವೆಯನ್ನು ಮಾಡುವ ಕುರಿತು.</u>**

**<u>ನಿರ್ಣಯ:</u>** ಪಿಲಿಕುಳದ ಗಡಿಗುರುತನ್ನು ಹಾಗೂ ವಿವಿಧ ವಿಭಾಗಗಳ ವಿಸ್ತೀರ್ಣವನ್ನು ಮತ್ತು ರಸ್ತೆ/ಕಟ್ಟಡಗಳನ್ನು Topography Survey ಮಾಡಲು ತಜ್ಞ ಸಂಸ್ಥೆಯ ಮೂಲಕ ಕೆ.ಟಿ.ಟಿ.ಪಿ. ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.

**ಕ್ರಮ: ಯೋಜನಾ ಅಭಿಯಂತರರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**<u>ವಿಷಯ ಸಂಖ್ಯೆ 20 : ಪ್ರಾಧಿಕಾರದ ಸ್ವಂತ ಆದಾಯವನ್ನು ಹೆಚ್ಚಿಸುವ ಕುರಿತು:</u>**

**<u>ನಿರ್ಣಯ:</u>** ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಸ್ವಂತ ಆದಾಯವನ್ನು ಹೆಚ್ಚಿಸುವ ಕುರಿತು ಎಲ್ಲಾ ವಿಭಾಗಗಳ ಮುಖ್ಯಸ್ಥರೊಂದಿಗೆ ಸಭೆಯನ್ನು ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಆಯುಕ್ತರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

**ಕ್ರಮ: ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**<u>ವಿಷಯ ಸಂಖ್ಯೆ 21 : ಪಿಲಿಕುಳ ಗಾಲ್ಫ್ ಕ್ಲಬ್‌ನಿಂದ ವಾರ್ಷಿಕ ಆದಾಯ ಪಡೆಯುವ ಕುರಿತು:</u>**

**<u>ನಿರ್ಣಯ:</u>** ಪಿಲಿಕುಳ ಗಾಲ್ಫ್ ಕ್ಲಬ್‌ನ ವಾರ್ಷಿಕ ಆದಾಯದಲ್ಲಿ ಶೇ 2 ರಷ್ಟನ್ನು ಎಪ್ರಿಲ್–2005 ರಿಂದ ಲೆಕ್ಕಹಾಕಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡುವುದೆಂದು ಗಾಲ್ಫ್ ಕ್ಲಬ್‌ನ ವಾರ್ಷಿಕ ಮಹಾಸಭೆಯಲ್ಲಿ ಚರ್ಚಿಸಲಾಗಿರುವ ವಿಚಾರವನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ಗಾಲ್ಫ್‌ಕ್ಲಬ್‌ನಿಂದ ವಾರ್ಷಿಕ ಲೆಕ್ಕಪತ್ರಗಳ ವರದಿಯನ್ನು ಪಡೆಯಲು ಸೂಚಿಸಲಾಯಿತು.

**ಕ್ರಮ: ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**<u>ವಿಷಯ ಸಂಖ್ಯೆ 22 : ಬ್ಯಾಟರಿ ಚಾಲಿತ ವಾಹನಗಳನ್ನು ಸಂದರ್ಶಕರ ಉಪಯೋಗಕ್ಕೆ ಬಳಸುವ ಕುರಿತು.</u>**

**<u>ನಿರ್ಣಯ:</u>** ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಸುಪರ್ದಿಯಲ್ಲಿರುವ 16 ಬ್ಯಾಟರಿ ಚಾಲಿತ ವಾಹನಗಳನ್ನು ಸಂದರ್ಶಕರ ಉಪಯೋಗಕ್ಕೆ ಬಳಸುವ ಕುರಿತು ಈಗಾಗಲೇ ಟೆಂಡರ್‌ನ್ನು ಕರೆಯಲಾಗಿದ್ದು, ಟೆಂಡರ್‌ದಾರರು ಈಗಾಗಲೇ ಕರಾರಿಗೆ ತಮ್ಮ ಒಪ್ಪಿಗೆ ನೀಡಿದ್ದರಿಂದ, ಬ್ಯಾಟರಿ ಚಾಲಿತ ವಾಹನಗಳನ್ನು ಸಂದರ್ಶಕರ ಉಪಯೋಗಕ್ಕೆ ಬಳಸುವ ಬಗ್ಗೆ ಶೀಘ್ರ ಕ್ರಮಕೈಗೊಳ್ಳುವಂತೆ ಟೆಂಡರ್‌ದಾರರಿಗೆ ಸೂಚಿಸಲು ತೀರ್ಮಾನಿಸಲಾಯಿತು.

**ಕ್ರಮ: ಯೋಜನಾ ಅಭಿಯಂತರರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**

**<u>ವಿಷಯ ಸಂಖ್ಯೆ 23 : ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ವಿವಿಧ ಕಾರ್ಯಕ್ರಮಗಳನ್ನು ನಡೆಸುವ ಕುರಿತು.</u>**

**<u>ನಿರ್ಣಯ:</u>** ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ 2024–25 ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ನಡೆಸುವ ಕುರಿತು ವಿವರವಾದ ಯೋಜನಾ ವರದಿಯನ್ನು ತಯಾರಿಸುವುದು. ಹಾಗೂ ಈ ಕಾರ್ಯಕ್ರಮಗಳಿಗೆ ಅವಶ್ಯಕವಾದ ಸಿಬ್ಬಂದಿಯನ್ನು ಹೊರಗುತ್ತಿಗೆ ಮೂಲಕ ಅಥವಾ ವಿವಿಧ ಕಾಲೇಜು ವಿದ್ಯಾರ್ಥಿಗಳ/ ಸಂಪನ್ಮೂಲ ವ್ಯಕ್ತಿಗಳ ಮೂಲಕ ನಿರ್ವಹಿಸಲು ನಿರ್ಧರಿಸಲಾಯಿತು.

**ಕ್ರಮ : ಕ್ಯುರೇಟರ್, ಪ್ರಾದೇಶಿಕ ವಿಜ್ಞಾನ ಕೇಂದ್ರ**

***ಧನ್ಯವಾದಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.***

ಸಹಿ/–
**ಆಯುಕ್ತರು**
**ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ**
**ಮಂಗಳೂರು**

ಸಹಿ/–
**ಅಧ್ಯಕ್ಷರು**
**ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ** ಹಾಗೂ
**ಜಿಲ್ಲಾಧಿಕಾರಿಯವರು, ದಕ್ಷಿಣ ಕನ್ನಡ, ಮಂಗಳೂರು**